ಐಕ್ಯರಂಗ

(ವಾರ ಪತ್ರಿಕೆ)

ಭಾರತ ಕಮ್ಯುನಿಸ್ಟ್ ಪಕ್ಷ[ಮಾರ್ಕ್ಸ್‌ವಾದಿ]ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 5 ಸಂಚಿಕೆ 18 ಮೇ 1, 1983 ಬೆಲೆ 60 ಪೈಸೆ

ಯುದ್ಧ ಪಿಪಾಸಿಗಳನ್ನು ಮಣ್ಣು ಮುಕ್ಕಿಸಿರಿ !

ಐಕ್ಯ ಹೋರಾಟವನ್ನು ಮುಂದುವರಿಸಿರಿ !!

1983ರ ಮೇ ದಿನದ ಕರೆ

1983ರ ಮೇ ದಿನಾಚರಣೆ ಬಹಳ ಮಹತ್ವಪೂರ್ಣವಾದುದಾಗಿದೆ. ಕರ್ನಾಟಕ ರಾಜ್ಯದಲ್ಲಿ ಪ್ರಪ್ರಥಮವಾಗಿ ಕಾಂಗ್ರೇಸ್ಸೇತರ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ಸರ್ವಾಧಿಕಾರಿಶಕ್ತಿಯನ್ನು ಸ್ವಲ್ಪಮಟ್ಟಿಗೆ ಹಿಮ್ಮೆಟ್ಟಿಸಲಾಗಿದೆ.

ಅಮೆರಿಕನ್ ಸಾಮ್ರಾಜ್ಯವಾದಿ ರೀಗನ್ ಸರ್ಕಾರ ಅಣುಯುದ್ಧದ ಬೆದರಿಕೆ ಹಾಕುತ್ತಿದೆ. ಜಗತ್ತಿನ ಶಾಂತಿಪ್ರಿಯ ಜನತೆಯಲ್ಲಿ ಅಮೆರಿಕನ್ ಸರ್ಕಾರದ ಯುದ್ಧ ಕೋರ ನೀತಿ ಕಳವಳ, ಪ್ರತಿಭಟನೆಗೆ ಎಡೆಕೊಟ್ಟಿದೆ. ಅಮೆರಿಕ, ಜರ್ಮನಿ, ಇಂಗ್ಲೆಂಡ್, ಮೊದಲಾದ ದೇಶಗಳಲ್ಲಿ ಸಹಸ್ರ ಸಹಸ್ರ ಜನರು ಯುದ್ಧದ ವಿರುದ್ಧ ಮತಪ್ರದರ್ಶನ ನಡೆಸುತ್ತಿದ್ದಾರೆ ಯುದ್ಧದಿಂದ ಜನತೆ ಸರ್ವನಾಶವಾಗುತ್ತದೆ; ಅಭಿವೃದ್ಧಿ ಕಾರ್ಯ ಕುಂಠಿತವಾಗುತ್ತದೆ, ಯುದ್ಧ ಅನಿವಾರ್ಯವಲ್ಲ; ಇದನ್ನು ತಡೆಗಟ್ಟಲೇಬೇಕೆಂಬ ಅಭಿಪ್ರಾಯ ಜಗತ್ತಿನ ಹೆಚ್ಚಿನ ಜನರಲ್ಲಿ ಮೂಡುತ್ತಿದೆ. ಯುದ್ಧದ ಅಪಾಯದ ಬಗ್ಗೆ ಕಾರ್ಮಿಕವರ್ಗ ಸರಿಯಾದ ತಿಳುವಳಿಕೆ ಹೊಂದಿಲ್ಲ. ಯುದ್ಧಕ್ಕೂ ಅವರ ಜೀವನಕ್ಕೂ ಸಂಬಂಧವಿದೆ ಎಂಬುದೂ ಸಹ ಹೆಚ್ಚು ಜನರಿಗೆ ಅರಿವಾಗಿಲ್ಲ. ಯುದ್ಧ ಎಲ್ಲೋ ನಡೆಯುತ್ತದೆ ನಮಗೇನು ಸಂಬಂಧ ಎಂಬ ಮಾತು ಬಹಳ ಜನರಿಂದ ಕೇಳಿಬರುತ್ತಿದೆ. ಈ ತಪ್ಪು ಅಭಿಪ್ರಾಯವನ್ನು ಹೋಗಲಾಡಿಸುವ ಜವಾಬ್ದಾರಿಯನ್ನು ಕಾರ್ಮಿಕ ವರ್ಗ ಹೊಂದಬೇಕು ಮತ್ತು ತನ್ನ ಅಂತರಾಷ್ಟ್ರೀಯ ಜವಾಬ್ದಾರಿಯನ್ನು ನಿರ್ವಹಿಸಬೇಕು. ಈ ವರ್ಷದ ಮೇ ದಿನದಂದು ಕಾರ್ಮಿಕವರ್ಗ ಯುದ್ಧ ವಿರೋಧಿ ಚಳುವಳಿಯಲ್ಲಿ ಭಾಗವಹಿಸಿ ಅಮೆರಿಕನ್ ಸಾಮ್ರಾಜ್ಯವಾದಿಗಳ ಅಣುಯುದ್ಧ ಸನ್ನಾಹವನ್ನು ಮಣ್ಣುಗೂಡಿಸುವ ಪ್ರತಿಜ್ಞೆ ಮಾಡಬೇಕಾಗಿದೆ. ಮತ್ತು ರೀಗನ್ ಸರ್ಕಾರ ಸಮಾಜವಾದಿ ಸೋವಿಯತ್ ದೇಶ ಮತ್ತು ಇತರ ಸ್ವಾತಂತ್ರ್ಯ ಪ್ರಿಯ ದೇಶಗಳನ್ನು ನಾಶಮಾಡುವ ಪಿತೂರಿಯನ್ನು ಬಯಲಿಗೆಳೆಯಬೇಕಾಗಿದೆ.

ಯುದ್ಧ ನಮ್ಮ ದೇಶದ ಬಾಗಿಲಿಗೇ ಬಂದಿದೆ. ಪಾಕಿಸ್ತಾನಕ್ಕೆ ಅಮೆರಿಕನ್ ಸರ್ಕಾರ ಬಾಂಬರ್‌ಗಳನ್ನು ಸರಬರಾಜು ಮಾಡುತ್ತಿದೆ. ಡಿಯೊಗೋಗಾರ್ಸಿಯಾ ದ್ವೀಪವನ್ನು ಅಣುಕ್ಷಿಪಣಿಗಳ ನೆಲೆಯನ್ನಾಗಿ ಮಾಡಲಾಗುತ್ತಿದೆ. ಕೇಂದ್ರ ಸರ್ಕಾರ ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಸರಬರಾಜು ಮಾಡುವುದು ದೇಶದ ರಕ್ಷಣೆಗೆ ಗಂಡಾಂತರ ಎಂದು ಹೇಳುತ್ತಿದ್ದರೂ ಅಮೇರಿಕನ್ ಸಾಮ್ರಾಜ್ಯವಾದಿಗಳ ವಿರುದ್ಧ ಇಡೀ ಭಾರತ ದೇಶದ ಜನತೆಯನ್ನು ಅಣಿಗೊಳಿಸಲು ತಯಾರಿಲ್ಲ. ಈ ಕೆಲಸವನ್ನು ಕಾರ್ಮಿಕವರ್ಗ ಮಾಡಬೇಕಾಗಿದೆ.

ಜನವರಿ 5ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ಸಿಗರ ಲೆಕ್ಕಾಚಾರ ತಲೆಕೆಳಗಾಗಿ ಕರ್ನಾಟಕ, ಆಂಧ್ರದಲ್ಲಿ ಕಾಂಗ್ರೆಸ್ ಸೋಲನ್ನು ಅನುಭವಿಸಿದೆ. ತ್ರಿಪುರದಲ್ಲಿಯೂ ಸಹ ಭಾರಿ ಸೋಲನ್ನು ಅನುಭವಿಸಿದೆ. ಕರ್ನಾಟಕದಲ್ಲಿ ಜನತಾಪಕ್ಷ ಅಧಿಕಾರಕ್ಕೆ ಬಂದಿದೆ. ಈ ಸರ್ಕಾರ ಶಾಂತಿಯುತ ಜನತಾ ಚಳುವಳಿಯನ್ನು ಹತ್ತಿಕ್ಕುವುದಿಲ್ಲವೆಂದು ಹೇಳಿದ್ದರೂ ಪೋಲೀಸ್ ನೀತಿ ಬದಲಾಗದೆ ಇರುವುದರಿಂದ ಶಾಂತಿಯುತ ಕಾರ್ಮಿಕರ ಚಳುವಳಿ ನಡೆಸುವುದಕ್ಕೆ ಪೋಲೀಸ್ ಸೆಕ್ಷನ್‌ಗಳು ಅಡ್ಡಿಯಾಗಿವೆ. ಜನತಾಪಕ್ಷದ ಸರ್ಕಾರ ವೃತ್ತಿ ತೆರಿಗೆ ರದ್ದು ಮಾಡಿದ್ದು ಸ್ವಾಗತಾರ್ಹ. ಮೇ ದಿನಾಚರಣೆಯನ್ನು ರಜಾ ದಿನವೆಂದು ಘೋಷಿಸಿದ್ದು ಸ್ವಾಗತಾರ್ಹವಾದುದು. ಅದರ ಸೌಲಭ್ಯ ಎಲ್ಲರಿಗೂ ಸಿಗುವಂತೆ ಆಗಬೇಕು. ಜನತಾಪಕ್ಷದ ಸರ್ಕಾರವನ್ನು ಉರುಳಿಸಲು ಕಾಂಗ್ರೆಸ್ (ಐ) ಅನೇಕ ಸನ್ನಾಹಗಳನ್ನು ಮಾಡುತ್ತಿದೆ. ಆದ್ದರಿಂದ ಕಾರ್ಮಿಕವರ್ಗದ ಜವಾಬ್ದಾರಿ ದ್ವಿಮುಖವಾಗಿದೆ. ಒಂದೆಡೆ ಜನತಾಪಕ್ಷ ಐದು ವರ್ಷಗಳವರೆಗೂ ಆಡಳಿತ ನಡೆಸಲು ಬೆಂಬಲ ಕೊಡಬೇಕಾಗಿದೆ. ಇನ್ನೊಂದೆಡೆ ಜನತಾಪಕ್ಷ ಸರಕಾರ ಅದರ ಪ್ರಣಾಳಿಕೆ ಘೋಷಣೆಗಳನ್ನು ಕಾರ್ಯಗತ ಮಾಡುವಂತೆ ಹಾಗೂ ರೈತ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಲು, ಹೋರಾಟ ನಡೆಸಬೇಕಾಗಿದೆ.

ಬೆಂಗಳೂರಿನಲ್ಲಿ ಐ.ಟಿ.ಸಿ., ಆಂಧ್ರ ಮತ್ತು ಸದರನ್ ಸ್ಟೀಲ್, ಕೆಂಗೇರಿಯಲ್ಲಿರುವ 'ಎಲೆಕ್ಟ್ರೋಮೆಕ್ಯಾಕೋ' ಹಾಗೆಯೇ ರಾಜ್ಯದ ಇತರ ಕಡೆಗಳಲ್ಲಿ ಆಡಳಿತ ವರ್ಗಗಳು ಕಾರ್ಮಿಕ ವಿರೋಧಿ, ಸಂಘವಿರೋಧಿ ಧೋರಣೆಯನ್ನು ಅನುಸರಿಸುತ್ತಿದೆ ಮಾತ್ರವಲ್ಲ ಸಿ.ಐ.ಟಿ.ಯು. ಮುಖಂಡರೊಡನೆ ಮಾತುಕತೆ ನಡೆಸುವುದಿಲ್ಲವೆಂದು ಬಹಿರಂಗವಾಗಿ ಹೇಳುತ್ತಿದ್ದಾರೆ. ಈ ನೀತಿ ವಿರುದ್ಧ ಈ ಕಾರ್ಖಾನೆಗಳಲ್ಲಿ ಕಾರ್ಮಿಕರು ಹೋರಾಟ ನಡೆಸುತ್ತಿದ್ದಾರೆ. ಸರಕಾರ ತನ್ನ ವಿಳಂಬ ಧೋರಣೆಯನ್ನು ಬಿಟ್ಟು ಈ ಕಾರ್ಖಾನೆಗಳ ಕಾರ್ಮಿಕರಿಗೆ ನ್ಯಾಯ ದೊರಕುವಂತೆ ಮಾಡಲು ಐಕ್ಯ ಹೋರಾಟ ಮಾಡಬೇಕಾಗಿದೆ.

ನಮ್ಮ ದೇಶದಲ್ಲಿ ರಾಷ್ಟ್ರೀಯ ಆಂದೋಳನ ಸಮಿತಿಯ ನೇತೃತ್ವದಲ್ಲಿ, ಕೇಂದ್ರ ಸರಕಾರದ ಕಾರ್ಮಿಕ

(8ನೇ ಪುಟ ನೋಡಿ)

ಸಂಪಾದಕೀಯ :

ನೀರಿನ ಬರ

ನಮ್ಮ ದೇಶದಲ್ಲಿ ಹೆಚ್ಚಿನ ರಾಜ್ಯಗಳು, ಮೂರರಲ್ಲಿ ಎರಡು ಭಾಗಕ್ಕಿಂತಲೂ ಹೆಚ್ಚಿನ ಪ್ರದೇಶ ನೀರಿನ ಬರದಂಥ ಹೊಸ ಗಂಡಾಂತರವನ್ನೆದುರಿಸುತ್ತಿದೆ. ಇಷ್ಟು ವರ್ಷ ಆಹಾರ-ಮೇವಿನ ಬರಗಳನ್ನಷ್ಟೇ ಕಂಡಿದ್ದೇವೆ. ಆದರೆ 1983ರಲ್ಲಿ ಕುಡಿಯಲು ನೀರಿಲ್ಲದ ನೂತನ ಸ್ವರೂಪ ಬರ, ದೇಶದ ಜನತೆಯನ್ನೆದುರಿಸುತ್ತಿದೆ.

ಪ್ರತಿ ದಿವಸ ಪತ್ರಿಕೆಗಳಲ್ಲಿ ಛಾಪಿಸಲ್ಪಡುತ್ತಿರುವ ದಾರುಣ ಕತೆಗಳು, ರಾಜಾಸ್ಥಾನ, ತಮಿಳುನಾಡು, ಕರ್ನಾಟಕ, ಮಹಾರಾಷ್ಟ್ರ, ಉತ್ತರ ಪ್ರದೇಶ, ಮಧ್ಯಪ್ರದೇಶಗಳಿಂದ ಕೇಳಿಬರುತ್ತಿರುವ ಸುದ್ದಿಗಳು ಕೇಂದ್ರ-ರಾಜ್ಯ ಸರಕಾರಗಳೂ, ವಿಜ್ಞಾನಿಗಳೂ ಸಮಸ್ಯೆಯ ಗಂಭೀರತೆಯನ್ನು ಅರಿತುಕೊಂಡು, ತ್ವರಿತ ಕಾರ್ಯದಲ್ಲಿ ಮುನ್ನುಗ್ಗುವಂತೆ ಮಾಡಿದೆ.

ಬಿಗ್ಗುಗಳನ್ನು ಆಳವಾಗಿ ಇಳಿಸಿದರೂ ಕೂಡ ನೀರು ದೊರೆಯುತ್ತಿಲ್ಲವೆಂಬ ವರದಿಗಳು ಬರುತ್ತಿವೆ. ಕಳೆದ ಕೆಲವು ವರ್ಷಗಳಿಂದ ಮಳೆ ಬೀಳುವುದು ಕಡಿಮೆಯಾಗುತ್ತಿದೆ. ನದಿ, ಕೆರೆ, ಹೊಳೆಗಳೆಲ್ಲ ಬತ್ತಿಹೋಗಿವೆ. ಮಣ್ಣು, ಉಸುಕುಗಳಿಂದ ತುಂಬಿಹೋಗಿದೆ. ಭೂಮಿಯಲ್ಲಿ ನೀರು ಕಡಿಮೆಯಾಗುತ್ತಿದೆಯೆಂದು ಕಂಡು ಬರುತ್ತಿದೆ.

ಸದಾ ಕಾಲ ನೀರು ಹರಿಯುವಂಥ ಗಂಗಾ, ಜಮುನಾಗಳಂಥ ನದಿಗಳಿವೆ. ಇವುಗಳಲ್ಲಿ ಹರಿಯುತ್ತಿರುವ ನೀರಿನ ಉಪಯೋಗ ದೇಶದ ಇತರ ಪ್ರದೇಶದ ಜನರಿಗೂ ಸಿಗುವಂತೆ ಮಾಡುವುದು ಅತ್ಯಗತ್ಯ. ಈ ದಿಸೆಯಲ್ಲಿ ಆಂಧ್ರ-ತಮಿಳುನಾಡು ರಾಜ್ಯಗಳು ಕೃಷ್ಣಾ ನೀರು ಕಾಲುವೆ ಮೂಲಕ ಮದ್ರಾಸ್ ನಗರ ಸೇರಬೇಕೆಂದು ಮಾಡಿಕೊಂಡ ಒಪ್ಪಂದ ಸ್ವಾಗತಾರ್ಹ.

ನೀರಿನ ಬರ ವಿದ್ಯುಚ್ಛಕ್ತಿ ಉತ್ಪಾದನೆಯನ್ನೂ, ಆಹಾರ ಧಾನ್ಯ ಬೆಳೆಗಳನ್ನೂ ಕುಂಠಿತಗೊಳಿಸುತ್ತದೆ. ಕೈಗಾರಿಕೆಗಳ ಮೇಲೂ ಪರಿಣಾಮವನ್ನುಂಟುಮಾಡುತ್ತದೆ.

ಇಡೀ ದೇಶದ ಬೆಳವಣಿಗೆಯ ಮೇಲೆ ನೀರಿನ ಬರ ಅತಿ ಕೆಟ್ಟ ಪರಿಣಾಮನ್ನುಂಟುಮಾಡುತ್ತಿರುವುದರಿಂದ, ಇದು ದೇಶದ ಅಳಿವು-ಉಳಿವಿನ ಪ್ರಶ್ನೆಯಾಗಿರುವುದರಿಂದ, ಕೇಂದ್ರ - ರಾಜ್ಯಗಳೂ, ವಿಜ್ಞಾನಿಗಳೂ ಇದರ ಕುರಿತು ವಿಚಾರಮಾಡಿ, ಸಮರ್ಪಕವಾದ ಉಪಾಯ ಕಂಡುಹಿಡಿಯ ಬೇಕಾಗಿರುವುದು ತುರ್ತು ಪ್ರಶ್ನೆಯಾಗಿದೆ.

ಇದಕ್ಕೆ ಜನತೆಯ ಉಗ್ರ ಚಳುವಳಿ ಅತ್ಯಗತ್ಯ. ಕೇಂದ್ರ-ರಾಜ್ಯ ಸರಕಾರಗಳ ಮೇಲೆ ಒತ್ತಡ ಅಗತ್ಯ. ಸಮತಾವಾದಿ ರಶ್ಯಾ-ಚೀನಾ ದೇಶಗಳು ವೋಲ್ಗಾ, ಯಾಂಗ್ಸೀಯಂಥ ನದಿಗಳ ದಿಕ್ಕನ್ನೇ ಬದಲಾಯಿಸಿ, ಬರ ಪ್ರದೇಶಗಳಿಗೆ ಆ ನೀರಿನ ಉಪಯೋಗ ಸಿಗುವಂತೆ ಮಾಡಿದ್ದಾರೆ. ಇಂಥ ಯೋಜನೆಗಳ ಮೂಲಕ ಅನುಭವ ನಮ್ಮ ದೇಶಕ್ಕೂ ಸಿಗುವಂತೆ ಮಾಡುವುದು ಕೇಂದ್ರ ಸರಕಾರದ ಕರ್ತವ್ಯ.

'ಐಕ್ಯರಂಗ'

ಓದುಗರಿಗೆ

'ಮೇ ದಿನ'ದ

ಕ್ರಾಂತಿಕಾರಿ

ಶುಭಾಶಯಗಳು

ನೆರೆಹೊರೆ

ಮಧ್ಯಪ್ರದೇಶದಲ್ಲಿ ಸಾಮೂಹಿಕ ಸತ್ಯಾಗ್ರಹ

ಪೋಲಿಸರು ಸುಸ್ತಾದರು - ಜೈಲು ಸಾಲದಾಯಿತು

ಠಕಾಯಿತರಿಗೆ ತರಣಾಗುವ ಆದರೆ ಹರಿಜನ, ಗಿರಿಜನರನ್ನು ದಮನ ಮಾಡುವ ಕಂಟ್ರಾಕ್ಟರುಗಳು ಕಾನೂನು ಬಾಹಿರವಾಗಿ ಮರ ಕಡಿದರೆ ಗಿರಿಜನರ ಮೇಲೆ ಗುಂಡು ಹಾರಿಸುವ ಮಧ್ಯ ಪ್ರದೇಶ ಸರಕಾರದ ಜನವಿರೋಧೀ ನೀತಿಗಳ ವಿರುದ್ಧ ಸಿ. ಪಿ. ಐ. (ಎಂ.) ಹಾಗೂ ಅದರ ಸಾಮೂಹಿಕ ಸಂಘಟನೆಗಳ ಕರೆಯ ಮೇರೆಗೆ ಕಳೆದ ಮಾರ್ಚ್ 21ರಲ್ಲಿ ಭೂಪಾಲ್‌ನಲ್ಲಿ ಅಭೂತಪೂರ್ವ ಸಾಮೂಹಿಕ ಸತ್ಯಾಗ್ರಹ ಹಾಗೂ ಕಾನೂನುಭಂಗ ಚಳುವಳಿ ನಡೆಯಿತು.

ಬಸ್ ಹಾಗೂ ರೈಲು ದರ ಏರಿಕೆಯ ರದ್ಧತಿ, ಪ್ರತಿಯೊಬ್ಬರಿಗೆ 12 ಕೆ. ಜಿ. ಗೋಧಿ, 1 ಕೆ. ಜಿ. ಸಕ್ಕರೆ ಹಾಗೂ 3 ಲೀಟರ್ ಸೀಮೆಎಣ್ಣೆ ಪೂರೈಕೆ, ಕೃಷಿ ಉತ್ಪಾದನೆಗಳಿಗೆ ಸಂಯೋಗ್ಯ ಬೆಲೆ, ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುವುದು, ಸಾಮೂಹಿಕ ಚೌಕಾಸಿಯ ಹಕ್ಕು, ಜಲಮಂಡಳಿಯ ರಚನೆ, ಬರ ಪರಿಹಾರ. ರೂ. 500 ಕನಿಷ್ಠ ವೇತನ, ಹರಿಜನ - ಗಿರಿಜನ ಅಲ್ಪಸಂಖ್ಯಾತರಿಗೆ ರಕ್ಷಣೆ, ಪಕ್ಷಾಯತಿ ಸಮಸ್ಯೆಯ ನಿರ್ಮೂಲನ ಇತ್ಯಾದಿ ಹಲವು ಬೇಡಿಕೆಗಳನ್ನು ಒತ್ತಾಯಿಸಲು ಈ ಸತ್ಯಾಗ್ರಹ ನಡೆಯಿತು.

ರಾಜ್ಯದ ಎಲ್ಲೆಡೆಗಳಿಂದಲೂ ಬಂದ ಸತ್ಯಾಗ್ರಹಿಗಳು ಸಿ. ಪಿ. ಐ. (ಎಂ), ಸಿ. ಐ. ಟಿ. ಯು. ಹಾಗೂ ಕಿಸಾನ್ ಸಭಾದ ಕೆಂಪು ಬಾವುಟಗಳ, ಬ್ಯಾನರುಗಳ, ಎಸ್. ಎಫ್. ಐ, ಡಿ. ವೈ. ಎಫ್. ಐ. ಹಾಗೂ ಜನವಾದಿ ಮಹಿಳಾ ಸಮಿತಿಯ ಬಿಳಿಯ ಬ್ಯಾನರುಗಳ ಸಾಗರವೇ ಆ ದಿನ ಸೇರಿದಂತಿತ್ತು. ಸಿ.ಪಿ.ಐ.(ಎಂ.)ನ ರಾಜ್ಯ ಸಮಿತಿಯ ಕಾರ್ಯದರ್ಶಿ ಮೋತಿಲಾಲ್ ಶರ್ಮ ಹಾಗೂ ಸಿ. ಐ. ಟಿ. ಯು. ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಪಿ. ಕೆ. ಮಿತ್ರರವರ ನೇತೃತ್ವದಲ್ಲಿ ಶಿಸ್ತಿನ, ಉತ್ಸಾಹಭರಿತ ಮೆರವಣಿಗೆಯ ನಂತರ ನಡೆದ ಸಾರ್ವಜನಿಕ ಸಭೆಯಲ್ಲಿ ಕಾ। ಶರ್ಮ ರಾಜ್ಯದ ಕಾಂಗ್ರೆಸ್(ಐ) ಸರ್ಕಾರದ ದುರಾಡಳಿತವನ್ನು ಖಂಡಿಸಿದರು. ಸಿ. ಪಿ. ಐ. (ಎಂ.) ಪಾಲಿಟ್‌ಬ್ಯೂರೋ ಸದಸ್ಯ ಕಾ। ಹರಿಕಿಶನ್ ಸಿಂಗ್ ಸುರ್‌ಜಿತ್ ಇಂದಿರಾ ಸರ್ಕಾರದ ಬಜೆಟ್ಟಿನ ಜನವಿರೋಧೀ ಸ್ವರೂಪವನ್ನು ವಿವರಿಸಿದರು. ಅದರಲ್ಲಿ ವಿಧಿಸಿದ ತೆರಿಗೆ ರೂ. 716 ಕೋಟಿ ಎಂದಿದ್ದರೂ ವಾಸ್ತವವಾಗಿ ಅದು 5000 ಕೋಟಿ ರೂಪಾಯಿಗಳಷ್ಟಾಗುತ್ತದೆ ಎಂದು ಅವರು ತಿಳಿಸಿದರು. ಮಧ್ಯಪ್ರದೇಶದ ಹರಿಜನ ಗಿರಿಜನರ ಮೇಲೆ ನಡೆಯುತ್ತಿರುವ ಅತ್ಯಾಚಾರಗಳ ಕುರಿತು ಹೇಳುತ್ತಾ, ಭಾರತದಲ್ಲಿ ನಡೆಯುತ್ತಿರುವ ಈ ರೀತಿಯ ಅತ್ಯಾಚಾರಗಳಲ್ಲಿ ಶೇ. 80 ರಷ್ಟು ಮಧ್ಯ ಪ್ರದೇಶ, ಉತ್ತರ ಪ್ರದೇಶ, ಬಿಹಾರ್, ಮತ್ತು ರಾಜಾಸ್ತಾನ್ ಈ ನಾಲ್ಕು ರಾಜ್ಯಗಳಲ್ಲೇ ನಡೆಯುತ್ತವೆ ಎಂದು ಅವರು ಹೇಳಿದರು. ಇದಕ್ಕೆ ವಿರುದ್ಧವಾಗಿ ತ್ರಿಪುರಾ ಹಾಗೂ ಪಶ್ಚಿಮ ಬಂಗಾಳದ ಎಡರಂಗದ ಸರಕಾರ ಜನಸಾಮಾನ್ಯರ ರಕ್ಷಣೆಗೆ ಎಲ್ಲಾ ಕ್ರಮ ಕೈಗೊಂಡಿವೆ. ಯಾಕೆಂದರೆ ಅವು ಶೋಷಣೆಯ ವಿರುದ್ಧ ಶೋಷಿತರು ನಡೆಸಿದ ಹೋರಾಟಗಳ ಫಲದಿಂದಲೇ ಸೃಷ್ಟಿಯಾಗಿವೆ ಎಂದು ಅವರು ವಿವರಿಸಿದರು.

ನಂತರ ಸತ್ಯಾಗ್ರಹಿಗಳು ಗುಂಪು ಗುಂಪುಗಳಾಗಿ 144ನೇ ಸೆಕ್ಷನ್ ಅನ್ನು ಮುರಿಯಲಾರಂಭಿಸಿದರು. ಸಜ್ಜಾಗಿದ್ದ ಸಶಸ್ತ್ರ ಪೋಲೀಸ್ ಅವರನ್ನು ಬಂಧಿಸಿ ಬಸ್ಸುಗಳಿಗೆ ತುಂಬಿಸಲಾರಂಭಿಸಿದರು. ಸ್ವಲ್ಪ ಹೊತ್ತಿನಲ್ಲೇ ತಾತ್ಕಾಲಿಕ ಸೆರೆಮನೆಯಾಗಿ ಪರಿವರ್ತನೆಗೊಂಡಿದ್ದ ಆಶಿಫ್ ಬೇಗ್ ಕ್ರೀಡಾಂಗಣ ಭರ್ತಿಯಾಗಿ ಹೋಯಿತು. ಒಬ್ಬರ ಬದಲು ಐವರು ಮ್ಯಾಜಿಸ್ಟ್ರೇಟರು ಬಂದು ಕೂತರು. ಈ ಬಂಧನದ ಔಪಚಾರಿಕ ಕ್ರಮಗಳನ್ನು ಪೂರೈಸುವಷ್ಟರಲ್ಲಿ ಮ್ಯಾಜಿಸ್ಟ್ರೇಟರೂ, ಪೋಲೀಸರೂ ಸುಸ್ತಾಗಿ ಬಿಟ್ಟಿದ್ದರು. 2500 ಜನ ಸತ್ಯಾಗ್ರಹಿಗಳನ್ನು ಬಂಧಿಸಲಾಯಿತು. ಇವರಲ್ಲಿ 500 ಮಂದಿ ಮಹಿಳೆಯರು. ಸರಕಾರ ನೂರಾರು ಸತ್ಯಾಗ್ರಹಿಗಳನ್ನು ಭೂಪಾಲ್ ತಲುಪದಂತೆ ತಡೆಹಿಡಿದರೂ ಕೂಡಾ ಸರಕಾರದ ಎಲ್ಲಾ ನಿರೀಕ್ಷೆಗಳನ್ನು ಮೀರಿ ನಡೆದ ಈ ಸತ್ಯಾಗ್ರಹ ರಾಜ್ಯದಲ್ಲಿ ಸಿ. ಪಿ. ಐ. (ಎಂ.) ಹಾಗೂ ಅದರ ಸಾಮೂಹಿಕ ಸಂಘಟನೆಗಳ ಹೆಚ್ಚುತ್ತಿರುವ ಶಕ್ತಿಯ ದ್ಯೋತಕ.

ಪಶ್ಚಿಮ ಬಂಗಾಳ ಕೃಷಿಕ್‌ಸಭಾ ಕರೆಗೆ ಓಗೊಟ್ಟು

ಕಲಕತ್ತೆಯಲ್ಲಿ ರೈತರ ಅಭೂತಪೂರ್ವ ಪ್ರದರ್ಶನ

ಪಶ್ಚಿಮ ಬಂಗಾಳ ರಾಜ್ಯ 1981 ರಿಂದ ಅನುಭವಿಸುತ್ತಿರುವ ಅತ್ಯಂತ ತೀವ್ರ ಸ್ವರೂಪದ ಬರಗಾಲವನ್ನು ಎದುರಿಸಲು ರಾಜ್ಯಕ್ಕೆ ಸಾಕಷ್ಟು ನೆರವು ನೀಡಬೇಕೆಂದು ಕೇಂದ್ರ ಸರಕಾರವನ್ನು ಒತ್ತಾಯಿಸಲು ರಾಜ್ಯದ ಮೂಲೆ ಮೂಲೆಗಳಿಂದ ಲಕ್ಷಗಟ್ಟಲೆ ರೈತರು ಏಪ್ರಿಲ್ 1 ರಂದು ಕಲ್ಕತ್ತೆಗೆ ಬಂದು ನಡೆಸಿದ ಪ್ರದರ್ಶನದಷ್ಟು ಬೃಹತ್ ಪ್ರಮಾಣದ ಪ್ರದರ್ಶನವನ್ನು ಕಲ್ಕತ್ತಾ ನಗರವೇ ಇತ್ತೀಚಿನ ವರ್ಷಗಳಲ್ಲಿ ಕಂಡಿರಲಿಲ್ಲ.

ರೈತಾಪಿ ವರ್ಗದ ಎಲ್ಲಾ ವಿಭಾಗಗಳ, ಸ್ತರಗಳ ಪ್ರತಿನಿಧಿಗಳು, ಸಾವಿರಾರು ಬಡರೈತರು, ಅಷ್ಟೇ ಸಂಖ್ಯೆಯಲ್ಲಿ ಕೃಷಿ ಕಾರ್ಮಿಕರು, ಆದಿವಾಸಿ ಕೃಷಿಕರು, ಹಿಂದುಗಳು, ಮುಸ್ಲಿಮರು, ಕ್ರಿಶ್ಚಿಯನ್ನರು ಕಲ್ಕತ್ತೆಗೆ ಬಂದದ್ದು ಕಾಂಗ್ರೆಸ್ ಕಾಲದಲ್ಲಾದಂತೆ ಭಿಕ್ಷಾಪಾತ್ರೆಯನ್ನು ಹಿಡಿದುಕೊಂಡಲ್ಲ. ಬದಲಿಗೆ ಎಡರಂಗ ಸರಕಾರ ಒದಗಿಸಿದ ನೆರವಿನೊಂದಿಗೆ ಭೀಕರ ಅನಾವೃಷ್ಟಿಯನ್ನು ಎದುರಿಸಿಯೇ ತೀರುತ್ತೇವೆಂಬ ಅದಮ್ಯ, ದೃಢ ನಿರ್ಧಾರದೊಂದಿಗೆ ಅವರು ಕಲ್ಕತ್ತೆಯ ಬೀದಿಗಳಲ್ಲಿ ಮೆರವಣಿಗೆ, ಪ್ರದರ್ಶನ ನಡೆಸಿದರು. ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷ ಬಿಜೊಯ್ ಚೌಧುರಿಯವರೆಂದಂತೆ ಸಾಮೂಹಿಕ ಜನಾಂದೋಲನದಲ್ಲಿ ಹೊಸ ಘಟ್ಟದ ಉದಯದ ದ್ಯೋತಕ ಈ ಬೃಹತ್ ರ್ಯಾಲಿ.

ರ್ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ಮುಖ್ಯಮಂತ್ರಿ ಜ್ಯೋತಿಬಸು ಅಪಾರ ಜನಸ್ತೋಮವನ್ನು ಅಭಿನಂದಿಸುತ್ತಾ ಜನತೆಯ ಸಮರಶೀಲ ಚೈತನ್ಯವನ್ನು ಎಂತಹ ತೀವ್ರ ಅನಾವೃಷ್ಟಿಯೂ ದಮನ ಮಾಡಲಾರದು ಎಂದು ಹೇಳಿದರು. ಇದಕ್ಕೆ ಕಾರಣ ಬೇರೆ ರಾಜ್ಯಗಳಿಂದ ಏಕ್‌ದಂ ಭಿನ್ನವಾದ ಸರಕಾರ ಪಶ್ಚಿಮ ಬಂಗಾಳದಲ್ಲಿ, ಅದೇ ರೀತಿ ತ್ರಿಪುರಾದಲ್ಲಿ ಇದೆ. ಅದು ಆಡಳಿತ ಅಧಿಕಾರಗಳನ್ನು ಕಲ್ಕತ್ತೆಯ ವಿಧಾನಮಂಡಲದಿಂದ, ಜಿಲ್ಲೆಗಳ ಅಧಿಕಾರಶಾಹಿಯಿಂದ ಪ್ರತ್ಯೇಕಿಸಿ ವಿಕೇಂದ್ರೀಕರಿಸಿದ್ದರಿಂದಲೇ 1978ರಲ್ಲಿ ಪ್ರವಾಹ ಪರಿಸ್ಥಿತಿಯನ್ನು, ಈಗ ಬರಗಾಲವನ್ನು ಎದುರಿಸಲು ಜನಸಾಮಾನ್ಯರ ಸಂಪೂರ್ಣ ಬೆಂಬಲ ಸಿಗುವುದು ಸಾಧ್ಯವಾಯಿತು ಎಂದು ಅವರು ವಿವರಿಸಿದರು.

ಕಾಂಗ್ರೆಸ್ ರಾಜ್ಯಭಾರದಲ್ಲಿ ಈ ಸ್ಥಿತಿ ಬಂದಿದ್ದರೆ ಹಲವಾರು ಬಡವರು ಹಸಿವಿನಿಂದ ಸಾಯಬೇಕಾಗುತ್ತಿತ್ತು, ಅಸಂಖ್ಯ ಹಳ್ಳಿಯ ಬಡವರು ಭಿಕ್ಷಾಪಾತ್ರೆಗಳನ್ನು ಹಿಡಿದು ಕಲ್ಕತ್ತೆಯ ಬೀದಿಗಳಲ್ಲಿ ಅಲೆಯಬೇಕಾಗುತ್ತಿತ್ತು. ಕೇಂದ್ರ ಸರಕಾರ ತನ್ನ ವಾರ್ಷಿಕ ಕೋಟಾವನ್ನೂ ಕೂಡಾ ರಾಜ್ಯಕ್ಕೆ ಒದಗಿಸದಿದ್ದರೂ ಕೂಡಾ ಎಡರಂಗ ಸರಕಾರ ಬಡಜನತೆಯ ನೆರವಿಗೆ ನಿಂತಿತು. ಆದಕ್ಕಾಗಿ ಎಡರಂಗ ಸರಕಾರವನ್ನು ಅಭಿನಂದಿಸಲು ಜನತೆ ಕಲ್ಕತ್ತೆಗೆ ಬಂದಿದ್ದಾರೆ ಎಂದು ಎಡರಂಗದ ಅಧ್ಯಕ್ಷ ಸರೋಜ್ ಮುಖರ್ಜಿ ತಮ್ಮ ಭಾಷಣದಲ್ಲಿ ಹೇಳಿದರು.

ಆಂಧ್ರ ಪ್ರದೇಶ : ಜನಪರ ಕ್ರಮಗಳಿಗೆ ಸ್ವಾಗತ

ವಿಶೇಷಾಜ್ಞೆಗಳ ಆಡಳಿತ ಶೈಲಿಯ ವಿರುದ್ಧ ಎಚ್ಚರಿಕೆ!

ಪ್ರಕಾಶಂ ಜಿಲ್ಲೆಯ ತಂಗುಟೂರ್ ಗ್ರಾಮದಲ್ಲಿ ಪೋಲೀಸರು ಇತ್ತೀಚೆಗೆ ನಿಷ್ಕಾರಣವಾಗಿ ಗುಂಡು ಹಾರಿಸಿದರು. ಈ ಬಗ್ಗೆ ನ್ಯಾಯಾಂಗ ತನಿಖೆ ನಡೆಸಲು ಎನ್. ಟಿ. ರಾಮರಾವ್ ಸರಕಾರ ನಿರ್ಧರಿಸಿರುವುದನ್ನು ಸಿ.ಪಿ. ಐ.(ಎಂ.)ನ ಆಂಧ್ರಪ್ರದೇಶ ರಾಜ್ಯ ಸಮಿತಿಯ ಕಾರ್ಯದರ್ಶಿ ಮಂಡಲಿ ಸ್ವಾಗತಿಸಿದೆ. ಆದರೆ ಸಂಬಂಧಪಟ್ಟ ಅಧಿಕಾರಿಗಳನ್ನು ವರ್ಗ ಮಾಡದಿರುವುದರಿಂದ ತನಿಖೆ ಸರಿಯಾಗಿ ನಡೆಸಲು ಸಾಧ್ಯವಾಗಲಿಕ್ಕಿಲ್ಲವೆಂದು ಮಂಡಲಿ ಖೇದ ವ್ಯಕ್ತಪಡಿಸಿದೆ.

ವಿಜಯವಾಡದಲ್ಲಿ ಮಾರ್ಚ್ 19 ಹಾಗೂ 20 ರಂದು ಸಭೆ ಸೇರಿದ್ದ ಕಾರ್ಯದರ್ಶಿ ಮಂಡಲಿಯು ತಂಬಾಕು ಬೆಳೆಗಾರ ಕಿರುಕುಳ ನಿಲ್ಲಿಸದಿದ್ದರೆ ತಂಬಾಕು ವ್ಯಾಪಾರವನ್ನು ರಾಜ್ಯ ಸರಕಾರ ವಹಿಸಿಕೊಳ್ಳಬೇಕೆಂದು ಒತ್ತಾಯಿಸಿದೆ. ಅದೇ ರೀತಿ ಚಿರಾಲಾದಲ್ಲಿರುವ ತನ್ನ ಕಾರ್ಖಾನೆಯನ್ನು ಹಾಗೂ ತಂಬಾಕು ಖರೀದಿ ಡಿಪ್ಪೋವನ್ನು ಮುಚ್ಚಿ ಆರು ಸಾವಿರ ಕಾರ್ಮಿಕರನ್ನೂ ತಂಬಾಕು ಬೆಳೆಗಾರರನ್ನೂ ಅತೀವ ಸಂಕಷ್ಟದಲ್ಲಿ ಸಿಲುಕಿಸಿರುವ ಐ.ಎಲ್.ಟಿ.ಡಿ. ಕಂಪೆನಿ ಎರಡನ್ನೂ ಮತ್ತೆ ತೆರೆಯುವಂತೆ ಮಾಡಬೇಕೆಂದು, ಅದಕ್ಕೆ ಒಪ್ಪದಿದ್ದರೆ ಕಾರ್ಖಾನೆ ಹಾಗೂ ಡಿಪ್ಪೋವನ್ನು ತಾನೇ ವಹಿಸಿಕೊಳ್ಳಬೇಕೆಂದೂ ರಾಜ್ಯ ಸರಕಾರ ಒತ್ತಾಯಿಸಿದೆ.

ವಿಧಾನ ಪರಿಷತ್ತು ರದ್ದು ಮಾಡುವ ವಿಧಾನ ಮಂಡಲಗಳ ಸದಸ್ಯರ ಪಿಂಚಣಿ ರದ್ದು ಮಾಡುವ ಕ್ರಮಗಳನ್ನು ಭೂಮಿತಿ ಕಾನೂನನ್ನು ಉಲ್ಲಂಘಿಸದೆ ಮಹಿಳೆಯರಿಗೆ ಸಮಾನ ಹಕ್ಕು ನೀಡುವ ಮಸೂದೆಯನ್ನು ಮಂಡಳಿ ಸ್ವಾಗತಿಸಿದೆ. ಅದೇ ವೇಳೆಯಲ್ಲಿ ವಿಶೇಷಾಜ್ಞೆಗಳ ಮೂಲಕ ಅಧಿಕಾರಶಾಹಿಯನ್ನವಲಂಬಿಸಿ ಕಾರ್ಯನಿರ್ವಹಿಸುವ ಶೈಲಿ ಪ್ರಜಾಪ್ರಭುತ್ವ ವಿರೋಧಿಯೆಂದೂ, ಇದು ಕಾಂಗ್ರೆಸ್ಸೇತರ ಸರಕಾರಗಳ ವಿರುದ್ಧ ಅಪಪ್ರಚಾರ ನಡೆಸಲು ಕಾಂಗ್ರೆಸ್(ಐ)ಗೆ ಅನುಕೂಲ ಮಾಡಿಕೊಟ್ಟಂತಾಗುವುದೆಂದೂ ಎಚ್ಚರಿಕೆ ನೀಡಿದೆ.

25 ಲಕ್ಷ ರೂಪಾಯಿಗಳ ಪಕ್ಷದ ನಿಧಿಯನ್ನು ಸಂಗ್ರಹಿಸುವ ಕರೆಯ ಮಹತ್ವದ ಕುರಿತು ಹೇಳುತ್ತಾ, ಎಷ್ಟು ಹಣ ಸಂಗ್ರಹವಾಯಿತು ಎನ್ನುವುದಕ್ಕಿಂತ ಎಷ್ಟು ಜನರಿಂದ ಎಂಬುದು ಮುಖ್ಯ ಎಂದು ಹೇಳಿದೆ,

ತಮಿಳುನಾಡು :

ಮುಷ್ಕರ ನಿಷೇಧದ ಮಸೂದೆಗೆ ಶತ ಧಿಕ್ಕಾರ

ಮುಷ್ಕರ / ನಿಷೇಧದ ಮಸೂದೆಗೆ ಶತಧಿಕ್ಕಾರ ಕಳೆದ ಮಾರ್ಚ್ 28ರಂದು ಮದರಾಸಿನಲ್ಲಿ ಎಂ. ಜಿ. ಆರ್. ಸರಕಾರದ ಕಾರ್ಮಿಕ-ವಿರೋಧೀ ನೀತಿಗಳನ್ನು ಪ್ರತಿಭಟಿಸಿ ಸದ್ಯ ವಿಧಾನ

(ಎಂಟನೇ ಪುಟ ನೋಡಿ)

ಕೆಂಪಾದ ಕಾನ್‌ಪುರ - ಅಭೂತಪೂರ್ವ ಅಧಿವೇಶನ

ಎನ್ಕೆ

ಕಳೆದ ಹತ್ತು ವರ್ಷಗಳಲ್ಲಿ ಇಂಥ ದೊಡ್ಡ ಮೆರವಣಿಗೆ ಕಾನ್‌ಪುರದಲ್ಲಿ ನಡೆದಿಲ್ಲವೆಂದು ಜನರ ಅಭಿಮತ. ಏಪ್ರಿಲ್ 13ರಿಂದ 17ರವರೆಗೆ ಕಾನ್‌ಪುರ ಕೆಂಪಾಗಿತ್ತು. 17ರಂದಂತೂ ಕೆಂಪು ಬಣ್ಣ ಮತ್ತಷ್ಟು ಕೆಂಪಗಾಗಿತ್ತು. ಹತ್ತು ಸಾವಿರ ಜನರ ಅಭೂತಪೂರ್ವ ಮೆರವಣಿಗೆ. ದೇಶದ ಪ್ರತಿಯೊಂದು ಪ್ರಾಂತದಿಂದ ಬಂದ ಪ್ರತಿನಿಧಿಗಳು, ಉತ್ತರ ಪ್ರದೇಶದ ಕಾರ್ಮಿಕ ಕೇಂದ್ರಗಳಿಂದಲೂ, ಕಾನ್‌ಪುರ ನಗರದಿಂದಲೂ ಬಂದ ಕಾರ್ಮಿಕರೂ, ಕೃಷಿ ಕೂಲಿಗಾರರೂ, ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. 5ನೆಯ ಅಖಿಲ ಭಾರತ ಸಿ.ಐ.ಟಿ.ಯು. ಸಮ್ಮೇಳನದ ಸಲುವಾಗಿ ಹದಿನೈದು ದಿವಸಕ್ಕೂ ಮೇಲ್ಪಟ್ಟು ದುಡಿದ 12ರಿಂದ 17ರವರೆಗೆ 2,500 ಪ್ರತಿನಿಧಿಗಳ ಯೋಗಕ್ಷೇಮ, ಊಟೋಪಚಾರಗಳಲ್ಲಿ ಸತತ ಮಗ್ನರಾಗಿದ್ದ 1,000 ಕೆಂಪು ಸಮವಸ್ತ್ರಧಾರಿ ಸ್ವಯಂಸೇವಕರೂ, ಸೇವಕಿಯರೂ ಈ ಮೆರವಣಿಗೆಯ ಮುಂದಳದಲ್ಲಿದ್ದರು. ಸಿ.ಐ.ಟಿ.ಯು. ಅಧ್ಯಕ್ಷರನ್ನು ಹೊತ್ತ ಲಾರಿ ಸ್ವಯಂಸೇವಕರ ಬೆನ್ನಹತ್ತಿತ್ತು. ಅದರ ಹಿಂದೆ ಪಶ್ಚಿಮ ಬಂಗಾಳ, ಕೇರಳ, ತಮಿಳುನಾಡು ಹೀಗೆ ಎಲ್ಲಾ ಪ್ರಾಂತಗಳ ಪ್ರತಿನಿಧಿಗಳು ಗಗನಭೇದಿಸುವ ಘೋಷಣೆಗಳನ್ನು ಕೂಗುತ್ತಾ ಸಾಗಿದರು. ಕರ್ನಾಟಕದ ಪ್ರತಿನಿಧಿಗಳು ಕನ್ನಡ ಘೋಷಣೆಗಳ ಮೂಲಕ ತಮ್ಮ ಪ್ರತ್ಯೇಕತೆಯನ್ನು ತೋರ್ಪಡಿಸುತ್ತಿದ್ದರು. ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಮೆರವಣಿಗೆ ಸಾರ್ವಜನಿಕ ಸಭೆ ಫೂಲ್‌ಬಾಗ್ ತಲುಪಬೇಕಾದರೆ ಎರಡು ಗಂಟೆ ಹಿಡಿಯಿತು.

ಗುಲಾಮಗಿರಿಯಿಂದ ದೇಶವನ್ನು ರಕ್ಷಿಸಿರಿ

"ದೇಶದ ಸ್ವಾತಂತ್ರ್ಯ ಗಂಡಾಂತರದಲ್ಲಿದೆ. ದೇಶವನ್ನು ವಿಭಜಿಸುವ ಭಾರಿ ಕುತಂತ್ರ ನಡೆದಿದೆ. ಈ ಕುತಂತ್ರವನ್ನು ವಿಫಲಗೊಳಿಸುವ ಸಲುವಾಗಿ ಶ್ರಮಿಕ ವರ್ಗ ಹಾಗೆಯೇ ರೈತರೆಲ್ಲ ಒಂದಾಗಿ ಹೋರಾಡದಿದ್ದರೆ, ದೇಶ ಮತ್ತೊಮ್ಮೆ ಗುಲಾಮನಾಗುವ ಭೀತಿ ತಪ್ಪಿದ್ದಲ್ಲ" ಎಂಬ ಎಚ್ಚರಿಕೆಯನ್ನು ದೇಶದ ದುಡಿಯುವ ವರ್ಗಕ್ಕೂ ಜನತೆಗೂ ಕೊಟ್ಟವರು ಸಿ.ಐ.ಟಿ.ಯು.ವಿನ ಅಧ್ಯಕ್ಷರಾದ ಬಿ. ಟಿ. ರಣದಿವೆಯವರು ಫೂಲ್‌ಬಾಗಿನಲ್ಲಿ ಐವತ್ತು ಸಾವಿರಕ್ಕೂ ಮೇಲ್ಪಟ್ಟು ನೆರೆದಿದ್ದ ಜನಸ್ತೋಮವನ್ನುದ್ದೇಶಿಸಿ ಅವರು ಭಾಷಣ ಮಾಡುತ್ತಿದ್ದರು. ಜಾತಿ, ಧರ್ಮ ಮತ್ತಿನ್ನಿತರ ಸಂಕುಚಿತ ವಿಚಾರಧಾರೆಗಳ ತಳಹದಿಯಲ್ಲಿ ಕಾರ್ಮಿಕ ಸಂಘಟನೆಗಳನ್ನು ಕಟ್ಟಿ ದೇಶದ ಸಂಘಟಿತ ಕೆಲಸಗಾರರ ಸಂಘಟನೆಗೆ ಮರಣಾಂತಿಕ ಪೆಟ್ಟುಕೊಡಲು ಅವರು ಹಿಂಜರಿಯುವುದಿಲ್ಲವೆಂದೂ, ಹಾಗಾದಲ್ಲಿ ಅದರಷ್ಟು ಅಪಾಯಕಾರಿ ಪರಿಸ್ಥಿತಿ ಮತ್ತೊಂದಿಲ್ಲವೆಂದೂ ಹೇಳಿದರು. ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯಿಂದ ಸಾಲ ಪಡೆಯುವ ಸಲುವಾಗಿ ಒಪ್ಪಿಕೊಂಡ ಕರಾರುಗಳಿಂದ ದೇಶದ ಆರ್ಥಿಕ ಸ್ವಾತಂತ್ರ್ಯ ಸಂಪೂರ್ಣ ಸಮಾಪ್ತಿಗೊಂಡು ಬಡ ಜನತೆಯ ಮೇಲೆ ಕರಭಾರ ಜಾಸ್ತಿಯಾಗುತ್ತಿದೆಯೆಂದು ತಿಳಿಸಿದರು. ದುಡಿಯುವ ಕಾರ್ಮಿಕ ವರ್ಗ ಬರೇ ತುಟ್ಟಿಭತ್ತೆ, ಬೋನಸ್ಸಿಗಾಗಿ ಅಷ್ಟೇ ಹೋರಾಟವನ್ನು ಸೀಮಿತಗೊಳಿಸದೆ, ದೇಶದ ಐಕ್ಯತೆಯನ್ನು ಯಾವ ರೀತಿ ಉಳಿಸಬಹುದೆಂಬುದರ ಕುರಿತು ವಿಚಾರ ಮಾಡಬೇಕಾಗಿರುವುದು ಅವರ ಕರ್ತವ್ಯವೆಂದು ದುಡಿಯುವ ಜನತೆಗೆ ತಮ್ಮ ಕರ್ತವ್ಯದ ನೆನಪು ಮಾಡಿಕೊಟ್ಟರು. ಕಾರ್ಮಿಕರಲ್ಲಿ ಐಕ್ಯತೆ ಬಾರದಿರುವುದು ಅವರಲ್ಲಿಯ ಕೊರತೆಯನ್ನು ತೋರ್ಪಡಿಸುತ್ತದೆಂದೂ ಎಲ್ಲಿ ತನಕ ಶ್ರಮಜೀವಿ ವರ್ಗದ ಜನತೆಯಲ್ಲಿ ರೈತ ವರ್ಗ ಕೂಡ ಸಂಯುಕ್ತ ರೂಪದಿಂದ ಹೋರಾಟ ಮಾಡುವುದಿಲ್ಲವೋ ಅಲ್ಲಿ ತನಕ ನಮ್ಮ ಉದ್ದೇಶ ಸಫಲಗೊಳ್ಳಲು ಸಾಧ್ಯವಿಲ್ಲವೆಂದು ಹೇಳಿ ಕಾರ್ಮಿಕ-ರೈತರ ಬಲವಾದ ಐಕ್ಯ ಹೋರಾಟ ಸಂಘಟಿಸಲು ಕರೆ ಕೊಟ್ಟರು.

ಸಿ. ಐ. ಟಿ. ಯು.ವಿನ ನೂತನ ಪ್ರಧಾನ ಕಾರ್ಯದರ್ಶಿಯವರಾದ ಸಮರ ಮುಖರ್ಜಿ, ಉಪಾಧ್ಯಕ್ಷರಾದ ಪಿ. ರಾಮಮೂರ್ತಿಯವರೂ ಬಹಿರಂಗ ಸಭೆಯಲ್ಲಿ ಭಾಷಣ ಮಾಡಿದರು. ಹಾಗೆಯೇ ಚೀನಾ ಮತ್ತು ಲಂಕಾ ಕಾರ್ಮಿಕ ಸಂಘಗಳ ಪ್ರತಿನಿಧಿಗಳು ಮಾತಾಡಿ ಶುಭ ಸಂದೇಶ ಕೋರಿದರು.

ಸಮ್ಮೇಳನದ ಚಟುವಟಿಕೆ

ಐದು ದಿವಸ ನಡೆದ ಸಮ್ಮೇಳನದಲ್ಲಿ ಮೂವತ್ತೆರಡಕ್ಕೂ ಮೇಲ್ಪಟ್ಟು ಬೇರೆ ಬೇರೆ ರಾಜ್ಯಗಳ ಪ್ರತಿನಿಧಿಗಳು ಭಾಷಣ ಮಾಡಿ, ತಂತಮ್ಮ ರಾಜ್ಯಗಳಲ್ಲಿ ಕಾರ್ಮಿಕ ಐಕ್ಯ ಹೋರಾಟ ನಡೆಸಿಕೊಂಡು ಹೋಗುವಾಗ, ರಾಷ್ಟ್ರೀಯ ಹೋರಾಟ ಸಮಿತಿಯ ನಿರ್ಣಯಗಳನ್ನು ಜಾರಿ ಮಾಡುವಲ್ಲಿ ಉಂಟಾದ ತೊಂದರೆ, ವಿಫಲತೆ, ಸಫಲತೆಗಳನ್ನೆಲ್ಲ ನಿರ್ಭೀತಿಯಿಂದ ವಿವರಿಸಿದರು. ಯುದ್ಧ ವಿರೋಧಿ, ಶಾಂತಿಗಾಗಿ ಹೋರಾಟ ಸಾಕಷ್ಟು ಫಲಕಾರಿ ನಡೆದಿಲ್ಲವೆಂಬುದನ್ನು ಒಪ್ಪಿಕೊಂಡು ದುಡಿಯುವ ಜನಸಾಮಾನ್ಯರಲ್ಲಿ ಅಮೇರಿಕದ ಸಾಮ್ರಾಜ್ಯಶಾಹಿಯ ಯುದ್ಧಕೋರ ನೀತಿಯ ದುಷ್ಪರಿಣಾಮಗಳನ್ನು ತಿಳಿಸಿ ಹೇಳಿ ಅವರೆಲ್ಲ ಸಾಮೂಹಿಕವಾಗಿ ಶಾಂತಿ ಹೋರಾಟದಲ್ಲಿ ಪಾಲ್ಗೊಳ್ಳುವಂತೆ ಮಾಡಬೇಕಾಗಿರುವುದರ ಅವಶ್ಯಕತೆಯನ್ನು ಒಪ್ಪಿಕೊಂಡರು. ಹಾಗೆಯೇ ಕಾರ್ಮಿಕರಲ್ಲಿ ಐಕ್ಯ ಹೋರಾಟ ನಡೆಸಲು ಸರ್ವ ಪ್ರಯತ್ನ ಮಾಡುವುದಷ್ಟೇ ಅಲ್ಲ, ರೈತ ಸಮುದಾಯದಲ್ಲೂ ಐಕ್ಯತೆ ಸಾಧಿಸಲು ಕ್ರಮ ಕೈಗೊಳ್ಳುವುದರ ಕುರಿತು ಮನವರಿಕೆ ಮಾಡಿಕೊಳ್ಳುವ ಅಗತ್ಯತೆಯನ್ನು ನೆನಸಿಕೊಂಡರು. ಕಳೆದ ಮೂರು ವರ್ಷಗಳಲ್ಲಿ ಹಲವಾರು ಕ್ಷೇತ್ರಗಳಲ್ಲಿ ಯಶಸ್ವಿಯಾಗಿ ನಡೆಸಿದ ಐಕ್ಯ ಹೋರಾಟಗಳ ಅನುಭವದಿಂದ ಪಾಠ ಕಲಿತು, ರಾಷ್ಟ್ರೀಯ ಹೋರಾಟ ಸಮಿತಿಯನ್ನು ಇನ್ನಷ್ಟು ಕರ್ತವ್ಯಪರವಾಗಿ ಮಾಡುತ್ತ ದೇಶದ ದುಡಿಯುವ ಜನರ ಮೂಲಭೂತ ಸಮಸ್ಯೆಗಳ ಕುರಿತು ಇಡೀ ದೇಶದ ಜನತೆಯ ಗಮನ ಸೆಳೆಯುವಂತಾಗಲು ಆ ಮೂಲಭೂತ ಸಮಸ್ಯೆಗಳ ಕುರಿತು ಸರ್ಕಾರ ಗಮನಹರಿಸುವಂತಾಗಲೂ, ರಾಷ್ಟ್ರೀಯ ಹೋರಾಟ ಸಮಿತಿಯನ್ನು ವಿಸ್ತಾರಗೊಳಿಸುತ್ತಿದ್ದಂತೆಯೇ ಕಾರ್ಮಿಕ ಸಂಘಗಳ 'ಕಾನ್‌ಫೆಡರೇಶನ್' ರಚನೆಯ ಕುರಿತೂ ತಮ್ಮ ಒಪ್ಪಿಗೆಯ ಅಭಿಪ್ರಾಯಗಳನ್ನು ಸೂಚಿಸಿದರು. ರಾಷ್ಟ್ರೀಯ ಹೋರಾಟ ಸಮಿತಿಯಲ್ಲಿರುವ ಘಟಕಗಳಲ್ಲಿ ಕೆಲವು ರಾಷ್ಟ್ರೀಯ ಸಮಸ್ಯೆಗಳ ಕುರಿತು ಮೂಲಭೂತ ಭಿನ್ನಾಭಿಪ್ರಾಯಗಳಿದ್ದರೂ ಕೂಡ, ಸರ್ವಾಧಿಕಾರದ ವಿರುದ್ಧ ಕಾರ್ಮಿಕರ ಐಕ್ಯ ಹೋರಾಟದ ಗುರಿಯನ್ನಿಟ್ಟುಕೊಳ್ಳುವ ಅಗತ್ಯವನ್ನೂ ಕೆಲವರು ವಿವರಿಸುತ್ತಾ, ಸಿ.ಐ.ಟಿ.ಯು.ವಿನ ಮೂಲ ಉದ್ದೇಶವನ್ನು ಬಿಟ್ಟುಕೊಡುವಂತಾಗಬಾರದೆಂದೂ ಹೇಳಲಾಯಿತು. ಐಕ್ಯ ಹೋರಾಟಗಳಲ್ಲಿ ಸಮಿತಿಯ ಕೆಲವು ಅಂಗ ಘಟಕಗಳು ಉತ್ಸಾಹದಿಂದ ಭಾಗವಹಿಸದಿರುವ ಕುರಿತು ಉಲ್ಲೇಖಗಳಾದವು. ಕಾರ್ಮಿಕ ಚಳುವಳಿಯನ್ನು ಮುಂದಕ್ಕೊಯ್ಯುವ ದೃಷ್ಟಿಯಲ್ಲಿ ಈ ಚರ್ಚೆ ಹೆಚ್ಚಿನ ಮಾರ್ಗಸೂಚಿಯಾಗಿ ಪರಿಣಾಮ ಬೀರುವುದರಲ್ಲಿ ಸಂಶಯವಿಲ್ಲ. ಅಧ್ಯಕ್ಷರು ತಮ್ಮ ಭಾಷಣದಲ್ಲಿ, ಪ್ರಧಾನ ಕಾರ್ಯದರ್ಶಿಯವರು ತಮ್ಮ ವರದಿಯಲ್ಲಿ ಉಲ್ಲೇಖಿಸಿರುವ ಸಮಸ್ಯೆ-ವಿಷಯಗಳ ಕುರಿತು ತಂತಮ್ಮ ಅಭಿಪ್ರಾಯಗಳನ್ನು ವ್ಯಕ್ತಮಾಡುವಾಗ ಪ್ರತಿನಿಧಿಗಳು ಟೀಕೆ - ಆತ್ಮ ಟೀಕೆ ಮಾಡಿರುವುದು ಚಳುವಳಿಗೆ ಹೆಚ್ಚು ಸಹಾಯಕಾರಿಯಾಗಿದೆ.

ಹೊಸ ಅಧಿಕಾರಿ ವರ್ಗ

ಬಿ. ಟಿ. ರಣದಿವೆಯವರನ್ನು ಅಧ್ಯಕ್ಷರನ್ನಾಗಿಯೂ, ಸಮರ ಮುಖರ್ಜಿಯವರನ್ನು ಪ್ರಧಾನ ಕಾರ್ಯದರ್ಶಿಯನ್ನಾಗಿಯೂ, ಪಿ. ರಾಮಮೂರ್ತಿ, ಜ್ಯೋತಿಬಸು, ಮನೋರಂಜನರಾಯ್, ಮಹಮ್ಮದ್ ಇಸ್ಮಾಯಿಲ್, ಸುಧೀನ್‌ಕುಮಾರ್, ಎಸ್. ವೈ. ಕೋಲಾಟಕರ್, ಸುಶೀಲಗೋಪಾಲನ್, ಸಿ. ಕಣ್ಣನ್, ಎನ್. ಪ್ರಸಾದರಾವ್, ಹರ್ಷಹಾಯ್‌ಸಿಂಗ್, ಕೆ. ರಮಣಿ ಇವರುಗಳನ್ನು ಉಪಾಧ್ಯಕ್ಷರನ್ನಾಗಿಯೂ, ಇ. ಬಾಲಾನಂದನ್ ಖಜಾಂಚಿಯಾಗಿ, ಎಂ. ಕೆ. ಪಾಂಡೆ, ನೃಸಿಂಗ ಚಕ್ರವರ್ತಿ ಕಮಲ್ ಸರ್ಕಾರ್, ನಿರೇನ್ ಘೋಷ್ ಎಂ. ಎಂ. ಲಾರೆನ್ಸ್, ಪಿ. ಕೆ. ಗಂಗುಳಿ ಇವರನ್ನು ಕಾರ್ಯದರ್ಶಿಗಳನ್ನಾಗಿಯೂ ಆರಿಸಲಾಯಿತು. 321 ಜನರ ಜನರಲ್ ಕೌನ್ಸಿಲ್ ಆರಿಸಲಾಯಿತು. ಜನರಲ್ ಕೌನ್ಸಿಲ್ ಸಭೆ ಸೇರಿ 79 ಸದಸ್ಯರ ಕಾರ್ಯಕಾರಿ ಸಮಿತಿ ಆರಿಸಲಾಯಿತು.

ಕರ್ನಾಟಕದಿಂದ ಎಸ್. ಸೂರ್ಯನಾರಾಯಣರಾವ್, ಸಿ. ನಂಜುಂಡಪ್ಪ, ವಿ. ಜೆ. ಕೆ. ನಾಯರ್, ಮೂಸಬ್ಬ, ಸವರಿದಾಸ್, ಕೆ. ಆರ್. ಶ್ರೀಮಾನ್ ಉಮೇಶನಾಯಕ, ರಾಜಮ್ಮ ಮತ್ತು ಎನ್. ಕೆ. ಉಪಾಧ್ಯಾಯರನ್ನು ಜನರಲ್ ಕೌನ್ಸಿಲಿಗೂ, ಸೂರ್ಯನಾರಾಯಣರಾವ್ ಅವರನ್ನು ಕಾರ್ಯಕಾರಿ ಸಮಿತಿಗೂ ಆರಿಸಲಾಯಿತು.

ಸಮ್ಮೇಳನದ ವೈಶಿಷ್ಟ್ಯ

ರಷ್ಯಾ - ಚೀನ ಸರ್ಕಾರಗಳೊಳಗೆ ಭಿನ್ನಾಭಿಪ್ರಾಯ ಉಂಟಾದ ನಂತರ ಸಿ.ಐ.ಟಿ.ಯು. ಸ್ಥಾಪನೆಯಾದ ನಂತರ ಮೊದಲನೇ ಸಲ ಸೋವಿಯೆತ್-ರಷ್ಯಾ ಮತ್ತು ಜನತಾ ಚೀನಾ ದೇಶಗಳ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳು ಒಂದೇ ವೇದಿಕೆಯ ಮೇಲೆ ಬಂದಿರುವುದು ಚರಿತ್ರಾರ್ಹ ಘಟನೆ. ಅದು ನಡೆದಿರುವುದು ಸಿ.ಐ.ಟಿ.ಯು.ವಿನ 5ನೇ ಸಮ್ಮೇಳನ ಕಾನ್‌ಪುರದಲ್ಲಿ ನಡೆದಾಗ.

ಬೆಳ್ತಂಗಡಿಯಲ್ಲಿ "ಹಳ್ಳಿಗಳಿಗೆ ಜಾತಾ"

ಹಳ್ಳಿಗಳಿಗೆ ಕಾಲ್ನಡಿಗೆಯಲ್ಲಿ ಜಾಥಾ ಹೋಗುವ ಕಾರ್ಯಕ್ರಮದ ಅಂಗವಾಗಿ ದ. ಕ. ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನಲ್ಲಿ ಕೆಲವು ಗ್ರಾಮಗಳಿಗೆ ಭೇಟಿ ಕೊಡಲಾಯಿತು. ಈ ಕಾರ್ಯಕ್ರಮದುದ್ದಕ್ಕೂ ಕಾಮ್ರೇಡ್ ಬಿ. ವಿಷ್ಣುಮೂರ್ತಿಯವರು ಕಾ। ಎಂ. ಕೆ. ಯವರೊಂದಿಗಿದ್ದರು. ಮೂರು ದಿನಗಳ ಕಾರ್ಯಕ್ರಮದಲ್ಲಿ ಮುಖ್ಯವಾಗಿ ಧರ್ಮಸ್ಥಳದ ಸಮೀಪದಲ್ಲಿರುವ ಕಳಂಜ ಗ್ರಾಮದಲ್ಲಿ ಬೇರ ಬೇರೆ ಕಡೆಗಳಲ್ಲಿ ಮೂರು ಸಭೆಗಳು ನಡೆದುವು. ಧರ್ಮಕ್ಕೆ ಹೆಸರಾಗಿರುವ (?) ಧರ್ಮಸ್ಥಳ ಮತ್ತು ಆಸುಪಾಸಿನ ಪ್ರದೇಶಗಳಲ್ಲಿ ಜನರ ದುಸ್ಥಿತಿಯ ಬಗ್ಗೆಯೂ, ಹಳ್ಳಿಯ ಬಡವರ ಮೇಲೆ ನಡೆಯುತ್ತಿರುವ ಶೋಷಣೆ ಮತ್ತು ದಬ್ಬಾಳಿಕೆಗಳ ಬಗ್ಗೆಯೂ ಅಧ್ಯಯನ ಮಾಡಲಾಯ್ತು.

ಸರ್ಕಾರಿ ಭೂಮಿಯಲ್ಲಿರುವ ಬಡ ಜನರು, ಬಡ-ರೈತರು ಮತ್ತು ಕೃಷಿ ಕೂಲಿಗಾರರ ಸಮಸ್ಯೆಗಳಿಗೆ ತುರ್ತು ಪರಿಹಾರ ದೊರೆಯುವಂತೆ ಮಾಡುವ ಹೋರಾಟ ನಡೆಸುವುದಿದ್ದರೆ ತಾವು ಸಂಪೂರ್ಣವಾಗಿ ಬಲವಿತ್ತು, ಭಾಗವಹಿಸುವುದಾಗಿ ಹೋದಲ್ಲೆಲ್ಲಾ ಬಡ ಜನರು ಆಶ್ವಾಸನೆ ಇತ್ತರು. ತಾಲ್ಲೂಕಿನಲ್ಲಿ ರೈತ ಸಂಘಟನೆಗೆ ಚಾಲನೆ ನೀಡಿ, ಅದನ್ನು ಬಲಪಡಿಸಿ, ಮುಂಬರುವ ದಿನಗಳಲ್ಲಿ ಪ್ರಬಲ ಚಳುವಳಿಗಳನ್ನು ನಡೆಸಲು ಮುಂದಾಗಲು ಕಾರ್ಯಕರ್ತರು ಮತ್ತು ಬಡ ಜನತೆ ಉತ್ಸುಕರಾಗಿದ್ದುದು ಕಂಡುಬಂತು ಎಂದು ಕಾ। ಎಂ. ಕೆ. ಭಟ್‌ರವರು ವರದಿಮಾಡಿದ್ದಾರೆ.

ರಾಜ್ಯಾದ್ಯಂತ ಬೀಡಿ ಕಾರ್ಮಿಕರಿಂದ ಯಶಸ್ವೀ ಪಿಕೆಟಿಂಗ್

ಕರ್ನಾಟಕ ರಾಜ್ಯ ಬೀಡಿ ಕೆಲಸಗಾರರ ಫೆಡರೇಶನ್ ಹಾಕಿಕೊಂಡಿದ್ದ ಕಾರ್ಯಕ್ರಮದ ಪ್ರಕಾರ ಏಪ್ರಿಲ್ 25 ರಂದು ಕರ್ನಾಟಕ ರಾಜ್ಯಾದ್ಯಂತ ಇರುವ ಬೀಡಿ ಕಾರ್ಮಿಕರು ಬೀಡಿ ಕಾರ್ಖಾನೆಗಳ ಮುಂದೆ ಪಿಕೆಟಿಂಗ್ ನಡೆಸಿರುವುದಾಗಿ ವರದಿಯಾಗಿದೆ. ಸಾವಿರ ಬೀಡಿಗಳಿಗೆ 12 ರೂಪಾಯಿ ಮಜೂರಿ, ರೂ. 8-33ರ ಬದಲಾಗಿ ಶೇಕಡಾ 20 ಬೋನಸ್ಸು ಮತ್ತು ಕಂಟ್ರಾಕ್ಟ್ ಪದ್ಧತಿ ರದ್ದಾಗಬೇಕೆಂಬುದು ಕಾರ್ಯಕ್ರಮದ ಪ್ರಮುಖ ಬೇಡಿಕೆಗಳಾಗಿದ್ದವು.

ಮಾಲೀಕರ ದೌರ್ಜನ್ಯಕ್ಕೆ ಖಂಡನೆ

ಕೆಂಪುಕಲ್ಲು ವ್ಯಾಪಾರಿ ಶ್ರೀ ಸುಂದರ ಪೂಜಾರಿ ಹಾಗೂ ಇತರ 4 ಮಂದಿ ಸೇರಿ ತಾ. 19-3-1983 ರಂದು ಅವರಲ್ಲಿ ಕೆಲಸ ಮಾಡುತ್ತಿದ್ದ ಶ್ರೀ ಕುಂಞಿಕಣ್ಣನ್ ನಂಬಿಯಾರ್ ಎಂಬುವರ ಮನೆಗೆ ನುಗ್ಗಿ, ಹೊಡೆದು ಲಾರಿಯಲ್ಲಿ ಹಾಕಿ ಹೂವಾಡಿಕಲ್ಲು ಎಂಬಲ್ಲಿರುವ ಕ್ವಾರಿಯಲ್ಲಿ ದೊಣ್ಣೆ ಹಿಡಿದು ಕೆಲಸ ಮಾಡಿಸಿದುದನ್ನು ತಾರೀಖು 22-3-83ರಂದು ಸೇರಿದ ಬಂಟ್ವಾಳ ಮತ್ತು ಮಂಗಳೂರು ತಾಲ್ಲೂಕು ಸ್ಟೋನ್ ಕ್ವಾರಿ ಅಂಡ್ ಅಲಾಯ್ಡ್ ಯೂನಿಯನ್ನಿನ ಕಾರ್ಯಕಾರಿ ಸಮಿತಿಯ ಸಭೆಯು ತೀವ್ರವಾಗಿ ಖಂಡಿಸುತ್ತದೆ.

ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳು ಕೂಡಲೇ ಇದನ್ನು ತನಿಖೆ ನಡೆಸಿ, ನ್ಯಾಯ ದೊರಕಿಸಬೇಕೆಂದು ಸಭೆಯು ಒತ್ತಾಯಿಸುತ್ತದೆ. ಎಲ್ಲಾ ಕಲ್ಲು ಕಡಿಯುವ ಮಜೂರರು ಇದನ್ನು ತೀವ್ರವಾಗಿ ಪ್ರತಿಭಟಿಸಬೇಕು ಎಂದು ಕಾರ್ಮಿಕರಿಗೆ ಕರೆ ನೀಡಲಾಗಿದೆ.

ಮೇ ದಿನ-ಒಂದು

ಮೇ 1, ವಿಶ್ವ ಕಾರ್ಮಿಕರ ದಿನ. ಮೇ ದಿನವನ್ನು ಜಗತ್ತಿನಾದ್ಯಂತ ಇರುವ ಕಾರ್ಮಿಕವರ್ಗ ಆಚರಿಸುತ್ತದೆ. ಸಮಾಜವಾದೀ ದೇಶಗಳಲ್ಲಿ ಇದನ್ನು ಹಬ್ಬವನ್ನಾಗಿ ಆಚರಿಸಿದರೂ ಕೂಡ ಬಂಡವಾಳಶಾಹೀ ದೇಶಗಳಲ್ಲಿನ ಕಾರ್ಮಿಕವರ್ಗ ಮೇ ದಿನವನ್ನು ಹೋರಾಟದ ದಿನವನ್ನಾಗಿಯೂ, ಸಮಾಜವಾದಕ್ಕಾಗಿನ ಹೋರಾಟವನ್ನು ಮುನ್ನಡೆಸುವ ಪ್ರತಿಜ್ಞೆಯನ್ನು ಸ್ವೀಕರಿಸುವ ದಿನವನ್ನಾಗಿಯೂ ಆಚರಿಸುತ್ತದೆ. ಕಳೆದ 93 ವರ್ಷಗಳಿಂದ ಆಚರಿಸುತ್ತಾ ಬರುತ್ತಿರುವ ಮೇ ದಿನದ ಐತಿಹಾಸಿಕ ಹಿನ್ನೆಲೆಯನ್ನು ಕುರಿತು ಈ ಲೇಖನದಲ್ಲಿ ವಿವರಿಸಲಾಗಿದೆ.

ಅತ್ಯಂತ ಕ್ರೂರ ದಬ್ಬಾಳಿಕೆಗೆ ಒಳಗಾಗಿದ್ದ ಕಾರ್ಮಿಕ ವರ್ಗವು ಬಂಡವಾಳಶಾಹೀ ವರ್ಗಕ್ಕೆದಿರಾಗಿ, ತನ್ನ ಮೂಲಭೂತ ಹಕ್ಕುಗಳ ಸ್ಥಾಪನೆಗಾಗಿ ಸಮರವನ್ನು ಸಾರಿದ ಮಹತ್ವದ ದಿನ—ಮೇ ದಿನ. ಶ್ರಮಜೀವಿ ವರ್ಗದ ಹಕ್ಕುಗಳಿಗಾಗಿ ನಡೆದ ಹೋರಾಟದಲ್ಲಿ ಜನ್ಮ ತಾಳಿದ—ಬಂಡವಾಳಶಾಹೀ ಸಮಾಜದ ನಿಷ್ಕರುಣ ಸುಲಿಗೆಯನ್ನು ಎದುರಿಸಿ ಹೋರಾಡಿದ ದಿನವೇ ಮೇ ದಿನ.

ಕೆಂಪು ಬಾವುಟವನ್ನು ಸೃಷ್ಟಿಸಿದ ಕೆಂಪು ದಿನ

ಜಾತಿ-ಮತಗಳ ಭೇದಭಾವಗಳನ್ನು ತೊರೆದು, ದೇಶ-ಭಾಷೆಗಳ ಗಡಿಗಳನ್ನು ಮೀರಿ ವಿಶ್ವಕಾರ್ಮಿಕರೆಲ್ಲಾ ಒಂದುಗೂಡಿ ಅತ್ಯುತ್ಸಾಹದಿಂದ ಆಚರಿಸುವ ಒಂದು ಚರಿತ್ರಾರ್ಹ ದಿನ—ಮೇ ದಿನ!

“ವಿಶ್ವ ಕಾರ್ಮಿಕರೇ, ಒಂದಾಗಿರಿ, ನೀವು ಏನನ್ನೂ ಕಳೆದುಕೊಳ್ಳುವುದಿಲ್ಲ. ಆದರೆ ನಿಮ್ಮನ್ನು ಬಂಧಿಸಿರುವ ಸಂಕೋಲೆಗಳನ್ನು ಕಿತ್ತೊಗೆದು ನೀವೊಂದು ನವ ಸಮಾಜವನ್ನು ನಿರ್ಮಿಸುತ್ತೀರಿ” ಎಂಬ ಘೋಷಣೆಯ ಸಂಕೇತವಾದ ಕೆಂಪು ಬಾವುಟವನ್ನು ಸೃಷ್ಟಿಸಿದ ಮಹತ್ವದ ದಿನ ಮೇ ದಿನ.

‘ಎಂಟು ಗಂಟೆಗಳ ಕಾಲ ಮಾತ್ರವೇ ದುಡಿಯುವೆವು’ ಎಂಬ ಗರ್ಜನೆಯ ತಳಹದಿಯಲ್ಲಿ ಪ್ರಾರಂಭವಾದ ಹೋರಾಟದ ಮೊದಲ ದಿನ ಮೇ ದಿನವಾದರೂ ಕೂಡ ಅದು ಕೇವಲ ಒಂದು ಆರ್ಥಿಕ ಕಾರಣಕ್ಕಾಗಿ ನಡೆದ ಹೋರಾಟವೆಂಬುದಾಗಿ ಕಾರ್ಮಿಕರೇ ಆಗಲಿ, ಮಾಲಿಕರೇ ಆಗಲಿ ಭಾವಿಸಲಿಲ್ಲ.

ಬಂಡವಾಳಗಾರರ ಸುಲಿಗೆಯನ್ನು ಕೊನೆಗೊಳಿಸುವುದಕ್ಕಾಗಿ ನಡೆದ ದೀರ್ಘ ಹೋರಾಟಕ್ಕೆ—ಹಸಿರು ದೀಪವಾಗಿ—ನಾಂದಿ ಹಾಡಿದ ಮೊದಲ ದಿನ ಮೇ ಒಂದು. ಆದ್ದರಿಂದಲೇ ‘ಎಂಟು ಗಂಟೆಗಳ ಕಾಲ ಮಾತ್ರ ದುಡಿಮೆ’ ಎಂಬ ಕಾರ್ಮಿಕರ ಬೇಡಿಕೆಯನ್ನು ಮಾಲೀಕ ವರ್ಗ ಒಪ್ಪಿಕೊಳ್ಳಲಿಲ್ಲ. ಆದರೆ ಕಾರ್ಮಿಕ ವರ್ಗ ತನ್ನ ಬೇಡಿಕೆಯನ್ನು ಕೈಬಿಡುವುದಕ್ಕೂ ಅಥವಾ ಮಾಲೀಕ ವರ್ಗದೊಡನೆ ರಾಜೀಮಾಡಿಕೊಳ್ಳುವುದಕ್ಕೂ ಸಿದ್ಧವಾಗಿರಲಿಲ್ಲ. ಮಾಲೀಕರಿಗೂ ಕಾರ್ಮಿಕರಿಗೂ ನಡೆದ ಹೋರಾಟ—ಬಂಡವಾಳಗಾರರ ಸುಲಿಗೆಗೂ, ದುಡಿಯುವ ಶಕ್ತಿಗೂ ನಡುವೆ ನಡೆದ ವರ್ಗ ಹೋರಾಟದ ಮೊದಲ ಅಧ್ಯಾಯವೇ ಮೇ ದಿನ.

ಹದಿನೆಂಟನೇ ಶತಮಾನದವರೆಗೂ ಅಮೇರಿಕಾದಲ್ಲೂ ಹಾಗೂ ವಿಶ್ವದ ಇತರ ಭಾಗಗಳಲ್ಲೂ ಕಾರ್ಮಿಕರು 16 ಗಂಟೆಗಳ ಕಾಲ, 18 ಗಂಟೆಗಳ ಕಾಲ, ಕೆಲವೊಮ್ಮೆ 20 ಗಂಟೆಗಳ ಕಾಲ ಕೂಡ ದುಡಿಯಬೇಕಾದ ಪರಿಸ್ಥಿತಿಯಿತ್ತು. ಕಾರ್ಮಿಕರ ದುಡಿಮೆಯನ್ನು ಚೆನ್ನಾಗಿ ಹೀರಿಕೊಂಡ ನಂತರ ಕೈಗೆ ಕೊಂಚ ಹಣ ನೀಡಿ ಹೊರಗಟ್ಟುತ್ತಿದ್ದ ಕಾಲ ಅದು. ಆ ಕೊಂಚ ಹಣ ಏಕೆ ಗೊತ್ತೇ? ದೇಹದಿಂದ ಪ್ರಾಣ ಬೇರ್ಪಡೆಯಾಗದಂತೆ ಅದನ್ನು ದೇಹಕ್ಕೇ ಅಂಟಿಕೊಂಡಿರುವಂತೆ ಮಾಡಬೇಕಾದ ಏರ್ಪಾಟುಗಳಿಗಾಗಿ—ಮತ್ತು ಸ್ವಲ್ಪ ದುಡಿಯಲು ಶಕ್ತಿಗಳಿಸಿಕೊಂಡು ಜೀವದೊಂದಿಗೆ ಮತ್ತೆ ಮರುದಿನ ಬಂದು ದುಡಿಮೆಯನ್ನು ಮಾರುವುದಕ್ಕಾಗಿ.

ಮೊಟ್ಟ ಮೊದಲನೆಯ ಕಾರ್ಮಿಕ ಸಂಘ

ಈ ರೀತಿಯಲ್ಲಿ ದಿನವೊಂದಕ್ಕೆ ಎಷ್ಟು ಕಾಲ ದುಡಿಯಬೇಕು ಎಂಬ ನಿಯಮವಿಲ್ಲದೆ ಶ್ರಮಜೀವಿಗಳು ಮಾಲೀಕರ ಕ್ರೂರ ದಬ್ಬಾಳಿಕೆಗೆ ತುತ್ತಾಗಿದ್ದ ಕಾಲ!

ಈ ಕ್ರೌರ್ಯವನ್ನು ಕಾರ್ಮಿಕ ವರ್ಗ ಅದೆಷ್ಟು ದಿನ ತಾನೇ ಸಹಿಸೀತು. ಈ ಶೋಷಣೆಯನ್ನು ಪ್ರತಿಭಟಿಸಿ ಅಮೇರಿಕಾದ ಕಾರ್ಮಿಕ ವರ್ಗ ಸಿಡಿದೆದ್ದಿತು. ಮೊದಲನೆಯದಾಗಿ ವಿಶ್ವದಲ್ಲಿ ‘ಕಾರ್ಮಿಕ ಸಂಘ’ ಎಂಬುದೊಂದು ಉದಯವಾದದ್ದು ಅಲ್ಲೇ.

1806ನೇ ಇಸವಿಯಲ್ಲಿ ಫಿಲಡೆಲ್ಫಿಯಾ ಎಂಬ ನಗರದಲ್ಲಿ ಅದು ಪ್ರಾರಂಭವಾಯಿತು.

ಮಾನವನು ತನಗಾಗಿ ದುಡಿಸಿಕೊಳ್ಳುವ ಪ್ರಾಣಿಗಳಿಗೂ ಕೂಡ ವಿಶ್ರಾಂತಿಯೆಂಬುದಿದೆ. ಆದರೆ ಈ ಲೋಕದ ಸಕಲ ಸಂಪತ್ತನ್ನು ಸೃಷ್ಟಿಸುವ—ಎಲ್ಲವನ್ನೂ ತನ್ನ ಅಧೀನಕ್ಕೊಳಪಡಿಸಿಕೊಂಡು ಆಳುವ ಸಾಮರ್ಥ್ಯವಿರುವ ಶಕ್ತಿಶಾಲೀ ಮಾನವನಿಗೆ ವಿಶ್ರಾಂತಿಯಿಲ್ಲ—ತನ್ನವರೊಂದಿಗೆ ಕೊಂಚ ಕಾಲ ಬೆರೆತು ಆನಂದಿಸುವ ಅವಕಾಶವಿಲ್ಲ.

‘ಕಾರ್ಮಿಕ ಸಂಘ’ದ ಮೊದಲ ಬೇಡಿಕೆ :

ಕಾರ್ಮಿಕ ಸಂಘವು ಪ್ರಪ್ರಥಮವಾಗಿ ಸಂಘಟಿಸಿದ ಚಳುವಳಿಯ ಮೊದಲನೆಯ ಬೇಡಿಕೆ ‘ಹತ್ತು ಗಂಟೆಗಳಿಗಿಂತ ಹೆಚ್ಚು ಕಾಲ ಕಾರ್ಮಿಕರನ್ನು ದುಡಿಸಿಕೊಳ್ಳಕೂಡದು’ ಎಂಬುದಾಗಿತ್ತು.

‘ಇನ್ನು ಮುಂದೆ ಹತ್ತು ಗಂಟೆಗಳ ಕಾಲ ಮಾತ್ರ ದುಡಿಯುತ್ತೇವೆ, ಉಳಿದ ಸಮಯ ವಿಶ್ರಾಂತಿ! ಕುಟುಂಬದವರೊಡನೆ ಸಹೋದ್ಯೋಗಿಗಳಿಯರೊಡನೆ ಬೆರೆತು ಸಂತೋಷಿಸುತ್ತೇವೆ’ ಎಂಬ ಬೇಡಿಕೆಯನ್ನು ಸಂಘವು ಮಾಲೀಕರ ಮುಂದೆ ಇಟ್ಟಿತು. ಆದರೆ ಅದನ್ನು ಮಾಲೀಕ ವರ್ಗ ಅಂಗೀಕರಿಸಲಿಲ್ಲ.

ಅದೇ ಸಮಯದಲ್ಲಿ ಈ ಬೇಡಿಕೆ ಅಮೆರಿಕದಾದ್ಯಂತ ಹರಡಿತು. ಜನಮನ್ನಣೆಯನ್ನು ಪಡೆಯಿತು. ಇದು ಅಪಾರ ಜನವರ್ಗವನ್ನು ಆಕರ್ಷಿಸಿತು. ಅದು ಕ್ರಿಯಾತ್ಮಕರೂಪ ಪಡೆದಾಗ ಬಂಡಾಯದ ಕಿಡಿ ಸಿಡಿಯಿತು.

ಕಾರ್ಮಿಕರು ಅಂತಿಮ ಅಸ್ತ್ರವನ್ನು ಪ್ರಯೋಗಿಸಿದರು

‘ಬೇಡಿ ಪ್ರಯೋಜನವಿಲ್ಲವೆಂದಾದರೆ ಹೋರಾಡಿ ಗಳಿಸೋಣ ಸೋದರರೇ!’ ಎಂಬ ಗರ್ಜನೆ ಮೊಳಗಿತು. 1827ನೇ ಇಸವಿಯಲ್ಲಿ ಅಮೇರಿಕದ ಕಾರ್ಮಿಕರು ನೇರ ಹೋರಾಟಕ್ಕೆ ಧುಮುಕಿದರು. ತಮ್ಮ ಕೊನೆಯ ಹೋರಾಟದ ಅಸ್ತ್ರವಾದ ಮುಷ್ಕರವನ್ನು ಹೂಡಿದರು.

‘ಉದಯ’

ಆದರೆ ಸುಲಿಗೆಕೋರರು ಅದನ್ನು ಅಷ್ಟು ಬೇಗ ಒಪ್ಪುವರೇ? ಬೇಡಿಕೆಯನ್ನು ಒಪ್ಪಿದ ಪಕ್ಷದಲ್ಲಿ ತನ್ನ ಸಮಾಧಿಯನ್ನು ತಾನೇ ತೋಡಿಕೊಂಡಂತಾಗುತ್ತದೆಂಬ ಅರಿವು ಅವರಿಗಿತ್ತು.

ಕೆಲಸದ ಅವಧಿ ಕಡಿಮೆಯಾದರೆ ಸುಲಿಗೆಯ ಮಟ್ಟವೂ ಕಡಿಮೆಯಾಗುವುದಲ್ಲವೇ? ಅಷ್ಟೇ ಅಲ್ಲ—

ಕಾರ್ಮಿಕರನ್ನು ಒಂದೆಡೆ ಬೆರೆತು ಚರ್ಚಿಸಲು ಅವಕಾಶ ನೀಡಿದರೆ ಮುಗಿಯಿತು. ಅದರಿಂದ ಉಂಟಾಗುವ ಅಪಾಯವನ್ನು ಕಲ್ಪಿಸಿಕೊಂಡರೇನೇ ಅಬ್ಬಾ! ಮಾಲೀಕ ವರ್ಗ ಭೀತಿಯಿಂದ ತತ್ತರಿಸಿತು!

ಶೋಷಕ ವರ್ಗದ ಆರ್ಥಿಕ ಬಲ—ಕಾರ್ಮಿಕರಲ್ಲಡಗಿದ್ದ ಭೀತಿ—ಬಲಿಷ್ಠ ಸಂಘಟನೆಯ ಕೊರತೆ—ಆಳುವ ವರ್ಗದ ಧೋರಣೆ—ಇವೆಲ್ಲವೂ 1827ರಲ್ಲಿ ನಡೆದ ಮುಷ್ಕರ ವಿಫಲಗೊಳ್ಳಲು ಕಾರಣವಾದವು.

ಸರ್ಕಾರ ತಲೆಬಾಗಬೇಕಾಯಿತು

ಆದರೂ ಕೂಡ ಕಾರ್ಮಿಕ ವರ್ಗ ತನ್ನ ಗುರಿ ಸಾಧನೆಗಾಗಿ ಅವಿರತವಾಗಿ ಹೋರಾಡಿತು. ತನ್ನ ಪ್ರಯತ್ನವನ್ನು ಮುಂದುವರಿಸಿತು. ತನ್ನ ಸಂಘಟನೆಯನ್ನು ಬಲಪಡಿಸಿಕೊಂಡಿತು ಚಳುವಳಿಯನ್ನು ತೀವ್ರಗೊಳಿಸಿ ಮುಂದುವರಿಯಿತು.

ಒಂದು ದಶಕದ ನಂತರ....ಅಂತಿಮವಾಗಿ ಕಾರ್ಮಿಕರ ಬಲಸಂವರ್ಧನೆಯನ್ನು ಕಂಡ ನಂತರ ಅಂದಿನ ಅಮೇರಿಕಾ ಸಂಯುಕ್ತ ಸಂಸ್ಥಾನದ ಅಧ್ಯಕ್ಷರಾಗಿದ್ದ ಪ್ರೇರಸ್ ಎಂಬುವರು ಸರ್ಕಾರಿ ನೌಕರರ ಕೆಲಸದ ಅವಧಿಯನ್ನು ಹತ್ತು ಗಂಟೆ ಕಾಲಕ್ಕೆ ಇಳಿಸುವ ಪರಿಸ್ಥಿತಿಯೊದಗಿತು. ಇದು ನಡೆದದ್ದು—1837ರಲ್ಲಿ. ಆದರೆ ಈ ಕಾನೂನನ್ನು ಮಾಲೀಕರು ಒಪ್ಪಿಕೊಳ್ಳಲಿಲ್ಲ. ಕಾರ್ಮಿಕ ವರ್ಗವೂ ಅದನ್ನು ಅಷ್ಟಕ್ಕೇ ಬಿಡಲಿಲ್ಲ. ತನ್ನ ಹೋರಾಟವನ್ನು ಮುಂದುವರಿಸಿತು

ಚಳುವಳಿಗಳು ಉಗ್ರಸ್ವರೂಪ ಪಡೆದವು. ಈ ಒತ್ತಡವನ್ನು ತಾಳಲಾರದ ಮಾಲೀಕ ವರ್ಗ ಕಾರ್ಮಿಕರ ಬೇಡಿಕೆಗಳಿಗೆ ಶರಣಾಯಿತು. ಹತ್ತು ಗಂಟೆಗಳ ದುಡಿಮೆ ಜಾರಿಯಾಯಿತು.

ಹೋರಾಟದಲ್ಲೇ ಬೆಳವಣಿಗೆ

ಈ ಒಂದು ವಿಜಯದೊಂದಿಗೇ ಮುಗಿಯಲಿಲ್ಲ ಕಾರ್ಮಿಕರ ವೀರ ಹೋರಾಟದ ಕಥೆ. ಅಥವಾ ಅಷ್ಟು ಮಾತ್ರವೇ ಅವರ ಅವಶ್ಯಕತೆಗಳನ್ನು ಪೂರೈಸಲಿಲ್ಲ.

ಜೀವನವೇ ಒಂದು ಹೋರಾಟ! ಹೋರಾಟದಲ್ಲೇ ಜೀವನದ ವಿಕಾಸ!

ಬಂದದ್ದೆಲ್ಲಾ ಬರಲಿ ಎಲ್ಲಾ ವಿಧಿನಿಯಮ’ ಎಂದು ಸುಮ್ಮನಿರದೆ, ‘ನಮ್ಮ ಹಣೆಬರಹವನ್ನು ನಿರ್ಣಯಿಸುವವರು ನಾವೇ’ ಎಂಬುದನ್ನು ಅರಿತರು. ಬಂಡವಾಳಶಾಹಿಗಳ ವಿರುದ್ಧವಾಗಿ ಹೋರಾಡಿದರೆ ಮಾತ್ರ ನಮ್ಮ ಹಕ್ಕುಗಳನ್ನು ಗಳಿಸಲು ಸಾಧ್ಯ—ಮನುಷ್ಯ ಮನುಷ್ಯನಂತೆ ಬದುಕಲು ಸಾಧ್ಯ ಎಂಬ ವಿಶ್ವಾಸವನ್ನು ತಾಳಿದರು.

ನಂತರ ಕಾರ್ಮಿಕರು ‘ಎಂಟು ಗಂಟೆ ಮಾತ್ರ ಕೆಲಸ’ ಎಂಬ ಘೋಷಣೆಯನ್ನು ಮೊಳಗಿಸಿದರು. ಈ ಬೇಡಿಕೆ ಅಮೇರಿಕಾದ ಸೀಮಾರೇಖೆಯನ್ನು ದಾಟಿ ಜಗತ್ತಿನ ಎಲ್ಲಾ ಭಾಗಕ್ಕೂ ಹರಡಿತು.

ಒಗ್ಗಟ್ಟು-ಸಂಘಟನೆ ಹೋರಾಟ

ತಮ್ಮ ಬೇಡಿಕೆಯ ಹೋರಾಟಕ್ಕೆ ಯಶಸ್ಸು ದೊರೆಯಬೇಕಾದರೆ—ಶಸ್ತ್ರಸಜ್ಜಿತರಾಗಿ ನಿಂತಿರುವ ಈ ಬಂಡವಾಳಿಗರನ್ನು ಸೋಲಿಸಬೇಕಾದರೆ—ನಿರಾಯುಧರಾಗಿರುವ ಕಾರ್ಮಿಕ ವರ್ಗ ತಮಗಾಗಿ ಒಂದು ಆಯುಧವನ್ನು ಸೃಷ್ಟಿಸಿಕೊಳ್ಳಬೇಕಲ್ಲವೇ?

‘ಒಗ್ಗಟ್ಟು’ ಎಂಬ ಬಂದೂಕಿನಿಂದ ‘ಮುಷ್ಕರ’ ಎಂಬ ಗುಂಡುಗಳನ್ನು ಹಾರಿಸಬೇಕು; ಶೋಷಣೆಗೆ ಇದಿರಾಗಿ ಗುರಿಯಿಡುವುದಕ್ಕೆ ‘ಸಂಘಟನೆ’ಯೆಂಬ ಸಿಪಾಯಿಯನ್ನು ಸೃಷ್ಟಿಸಿಕೊಳ್ಳಬೇಕು ಎಂಬುದನ್ನು ಕಾರ್ಮಿಕ ವರ್ಗ ಮನದಟ್ಟು ಮಾಡಿಕೊಂಡಿತು.

ಬಂಡವಾಳಶಾಹಿಗಳ ಸುಲಿಗೆಗಿದಿರಾಗಿ ರಾಜಕೀಯ ಹೋರಾಟವಾಗಿ ಈ ಎಂಟು ಗಂಟೆ ಅವಧಿಯ ಕೆಲಸದ ಚಳುವಳಿ ರೂಪುಗೊಂಡಿತು.

ಅದೇ ಸಮಯದಲ್ಲಿ 1847ರಲ್ಲಿ ಇಂಗ್ಲೆಂಡ್‌ನಲ್ಲಿ ‘ಕಮ್ಯೂನಿಸ್ಟ್ ಲೀಗ್’ ಎಂಬ ಸಂಸ್ಥೆ ಜನ್ಮ ತಾಳಿತು. ಅದರ ಪ್ರಣಾಳಿಕೆಯಾಗಿ ವಿಶ್ವಪ್ರಸಿದ್ಧ ‘ಕಮ್ಯೂನಿಸ್ಟ್ ಮ್ಯಾನಿಫೆಸ್ಟೋ’ ಶ್ರಮಜೀವಿ ವರ್ಗದ ಪ್ರಾಧ್ಯಾಪಕರೆನಿಸಿದ ಕಾರ್ಲ್‌ಮಾರ್ಕ್ಸ್ ಮತ್ತು ಫೆಡ್ರಿಕ್ ಎಂಗೆಲ್ಸ್‌ರಿಂದ ಪ್ರಕಟಿಸಲ್ಪಟ್ಟಿತು. ಬ್ರಿಟನ್‌ನಲ್ಲಿ ಕಾರ್ಮಿಕರ ಬೇಡಿಕೆಗಳಿಗಾಗಿ ‘ಚಾರ್ಟಿಸ್ಟ್’ ಚಳುವಳಿ ಪ್ರಾರಂಭಗೊಂಡಿತು. ಫ್ರಾನ್ಸ್ ಮತ್ತು ಜರ್ಮನಿಗಳಲ್ಲಿ ಕ್ರಾಂತಿಯ ಬಿರುಗಾಳಿ ಬೀಸತೊಡಗಿತು.

ಶ್ರಮಜೀವಿ ವರ್ಗದ ನಾಯಕರೊಡನೆ ಸಂಪರ್ಕ

ಅಮೇರಿಕಾದಾದ್ಯಂತ ಅಸ್ತಿತ್ವದಲ್ಲಿದ್ದ ಅರವತ್ತು ಕಾರ್ಮಿಕ ಸಂಘಗಳ ಪ್ರತಿನಿಧಿಗಳು 1866ನೇ ಇಸವಿ ಬಾಲ್ಟಿಮೂರ್ ನಗರದಲ್ಲಿ ಸಭೆ ಸೇರಿದರು. ‘ರಾಷ್ಟ್ರೀಯ ಕಾರ್ಮಿಕ ಸಂಘ’ ಎಂಬ ಸಂಸ್ಥೆಯನ್ನು ಸ್ಥಾಪಿಸಿದ್ದರು. ಇದರ ನಾಯಕರಾಗಿ ವಿಲಿಯಂ ಸಿಲ್ವಿಸ್ ಎಂಬುವರು ಆಯ್ಕೆಯಾದರು.

ಇದೇ ಸಮಯದಲ್ಲಿ ಮಾರ್ಕ್ಸ್ ಮತ್ತು ಎಂಗೆಲ್ಸರ ನಾಯಕತ್ವದಲ್ಲಿ ಲಂಡನ್ ಮಹಾನಗರದಲ್ಲಿ ಮೊದಲನೆಯ ಅಂತರಾಷ್ಟ್ರೀಯ ಕಾರ್ಮಿಕ ಸಮ್ಮೇಳನ ರೂಪುಗೊಂಡಿತ್ತು. ಇವೆರಡೂ ಸಂಸ್ಥೆಗಳ ನಡುವೆ ಸೌಹಾರ್ದ ಸಂಬಂಧ ಸ್ಥಾಪನೆಯಾಯಿತು. ಮಾರ್ಕ್ಸ್ ಮತ್ತು ಎಂಗೆಲ್ಸ್‌ರೊಂದಿಗೆ ಉಂಟಾದ ಸಿಲ್ವಿಸ್‌ರ ಸಂಪರ್ಕದಿಂದ ಅಮೇರಿಕಾದ ಕಾರ್ಮಿಕ ಸಂಘವು ಉತ್ಕೃಷ್ಟವಾದೊಂದು ರಾಜಕೀಯ ಸೈದ್ಧಾಂತಿಕ- ವರ್ಗಪ್ರಜ್ಞೆಗಳಿಂದೊಡಗೂಡಿದ ಒಂದು ಬಲಿಷ್ಠ ಸಂಘಟನೆಯಾಗಿ ಬೆಳೆದು ಬಂದಿತು.

‘ಎಂಟು ಗಂಟೆ ಕೆಲಸ’ದ ಹಕ್ಕನ್ನು ಗಳಿಸಿಯೇ ತೀರುವೆವೆಂಬ ಆತ್ಮವಿಶ್ವಾಸವನ್ನು ಈ ಸಂಘವು ಕಾರ್ಮಿಕರಲ್ಲಿ ಬೆಳೆಸಿತು. ಈ ಗುರಿ ಸಾಧನೆಗಾಗಿ ಕೊನೆಯವರೆಗೂ ಹೋರಾಟ ನಡೆಸಬೇಕೆಂದು ಸಂಘವು ತೀರ್ಮಾನಿಸಿತು. ಇದಕ್ಕಾಗಿ ಅಮೇರಿಕಾದಾದ್ಯಂತ ಸಂಘಗಳು ಸ್ಥಾಪಿತಗೊಂಡವು.

ಬೋಸ್ಟನ್ ನಗರದ ಕಾರ್ಖಾನೆಯೊಂದರ ಕಾರ್ಮಿಕರಾದ ಇರಾ ಸ್ಟೀವರ್ಡ್ ಎಂಬುವವರು ಈ ಸಂಘದ ನಾಯಕರಾದರು. ಸಿಡಿದೆದ್ದ ಕಾರ್ಮಿಕರ ಹೋರಾಟದ ಮುಂದೆ ಅಮೆರಿಕಾ ಸರ್ಕಾರ ತಲೆಬಾಗಬೇಕಾಗಿತ್ತು. ‘ರಾಷ್ಟ್ರೀಯ ಸಮ್ಮೇಳನ’ವನ್ನು ಮಾತುಕತೆಗೆ ಕರೆದ ಸರ್ಕಾರ ಕಾರ್ಮಿ

ಐತಿಹಾಸಿಕ ಹಿನ್ನೋಟ

ಕರ ಬೇಡಿಕೆಗೆ ಮನ್ನಣೆ ನೀಡಿತು. ಅದಕ್ಕೊಂದು ಶಾಸನವನ್ನು ಸಹ ರಚಿಸಲಾಯಿತು. ಇದು ನಡೆದದ್ದು 1868ರಲ್ಲಿ.

ರಾಜಕೀಯ ಜಾಗೃತಿಯೂ, ಅಂತರಾಷ್ಟ್ರೀಯ ಭಾವನೆಗಳೂ, ಬಲಿಷ್ಠ ಕಾರ್ಮಿಕ ಸಂಘಟನೆಗಳೂ ಬೆಳೆಯುತ್ತಿರುವ ಇಂದಿನ ದಿನಗಳಲ್ಲೂ ಕೂಡ ಯಾವುದಾದರೂ ಶಾಸನವನ್ನು ಮಾಲಿಕರು ಅಂಗೀಕರಿಸಬೇಕಾದರೆ ಎಂಥ ಭೀಕರ ಹೋರಾಟಗಳನ್ನೂ, ತ್ಯಾಗ ಬಲಿದಾನಗಳನ್ನೂ ಮಾಡಬೇಕಾಗಿದೆ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡರೆ ಆಗಿನ ಕಾಲದ ಪರಿಸ್ಥಿತಿಯನ್ನು ಊಹಿಸಲು ಕಷ್ಟಪಡಬೇಕಾಗಿಲ್ಲ. ಯಾವ ಮಾಲೀಕನೂ ಆ ಕಾನೂನುಗಳನ್ನು ಒಪ್ಪಲು ತಯಾರಿರಲಿಲ್ಲ. ಕಾರ್ಮಿಕರು ತಮ್ಮ ರಕ್ತವನ್ನು ಹೊಳೆಯಾಗಿ ಹರಿಸಬೇಕಾಗಿತ್ತು.

ಮಾಲೀಕರ ಪ್ರತಿರೋಧ ಫಲಿಸಲಿಲ್ಲ

1877ರಲ್ಲಿ ರೈಲ್ವೇ ಕಾರ್ಮಿಕರು, ಗಣಿ ಕಾರ್ಮಿಕರು ಮಹತ್ತಾದ ಹೋರಾಟದಲ್ಲಿ ಧುಮುಕಿದರು. ಇದನ್ನು ಕಂಡ ಮಾಲೀಕ ವರ್ಗ ಕಾರ್ಮಿಕರ ಐಕ್ಯತೆಯನ್ನು ಮುರಿಯುವ ಅನೇಕ ವಿಫಲ ಸಾಹಸಗಳನ್ನು ಮಾಡಿತು.

ಹೋರಾಟವನ್ನು ಮುರಿಯಲು ಅನೇಕ ಸಂಚುಗಳನ್ನು ನಡೆಸಿತು, ಕರಿಯ-ಬಿಳಿಯ ಎಂಬ ವರ್ಣ ಭೇಧ ನೀತಿಯನ್ನು ಸೃಷ್ಟಿಸಿತು. ಆದರೆ ಕಾರ್ಮಿಕರು—ಇವು ಯಾವುದಕ್ಕೂ ಮಣಿಯಲಿಲ್ಲ.

ಇದನ್ನು ಕುರಿತು 1867ರಲ್ಲಿ ಕಾರ್ಲ್‌ಮಾರ್ಕ್ಸ್ ತಮ್ಮ 'ಬಂಡವಾಳ' ಎಂಬ ಕೃತಿಯಲ್ಲಿ 'ಎಲ್ಲಿಯವರೆಗೂ ನೀಗ್ರೋಗಳನ್ನು ಗುಲಾಮರನ್ನಾಗಿ ನಡೆಸಿಕೊಳ್ಳಲಾಗುವುದೋ ಅಲ್ಲಿಯವರೆಗೂ ಬಿಳಿಯ ಕಾರ್ಮಿಕರಿಗೆ ವಿಮೋಚನೆಯಿಲ್ಲ' ಎಂಬುದನ್ನು ಸ್ಪಷ್ಟವಾಗಿ ತಿಳಿಸಿದ್ದಾರೆ.

ದಬ್ಬಾಳಿಕೆ ತೀವ್ರಗೊಂಡಿತು

ಮಾಲೀಕರ ಪ್ರಯತ್ನಗಳು ಫಲಿಸದಾದಾಗ ಅವರು ಮತ್ತಷ್ಟು ಕೋಪಗೊಂಡರು. ಶೋಷಕರ ಗುಂಪು ಕಾರ್ಮಿಕರೊಡನೆ ಮಾತುಕತೆ ನಡೆಸಿತು. ಅದೂ ವಿಫಲಗೊಂಡಾಗ ತನ್ನ ರಕ್ಷಣೆಗಾಗಿಯೇ ಇರುವ ಸರಕಾರವನ್ನು ಮೊರೆ ಹೊಕ್ಕಿತು.

ತಮ್ಮ ಮೇಲೆ ಧಾಳಿ ನಡೆಸುವ ಸರಕಾರದ ಪಡೆಗಳೊಡನೆ ಕಾರ್ಮಿಕ ವರ್ಗ ಹೋರಾಟಕ್ಕಿಳಿಯಬೇಕಾಯಿತು. ಇದರಿಂದಾಗಿ ಹತ್ತು ಮಂದಿ ಗಣಿ ಕಾರ್ಮಿಕರು ನೇಣುಗಂಬವೇರಬೇಕಾಯಿತು.

ದಬ್ಬಾಳಿಕೆ ಮತ್ತು ಹೋರಾಟಗಳು ತೀವ್ರತರವಾಗುತ್ತಿರುವುದನ್ನು ಕಂಡ ಮಿತವಾದಿ ನಾಯಕರು ಪಲಾಯನ ಮಾಡಿದರು. ತಲೆಯ ಮೇಲೆ ಆಕಾಶವೇ ಕಳಚಿಬಿದ್ದರೂ ಸಹ ನಾವು ಹಿಂದೆಗೆಯುವುದಿಲ್ಲ ಎಂಬ ಧೈರ್ಯದಿಂದ ಕಾರ್ಮಿಕರು ಮುನ್ನಡೆದರು.

ಅಮೇರಿಕಾದ ಶ್ರಮಜೀವಿ ವರ್ಗದ ಹೋರಾಟದ ಕೇಂದ್ರ ಬಿಂದುವಾಗಿದ್ದ—ಹೋರಾಟಗಳ ಮುಂಚೂಣಿಯಾಗಿದ್ದ **ಚಿಕಾಗೋ** ನಗರದಲ್ಲಿ ಒಂದು ಬೃಹತ್ ಸಾರ್ವತ್ರಿಕ ಮುಷ್ಕರವನ್ನು ನಡೆಸಬೇಕೆಂದು ತೀರ್ಮಾನಿಸಲಾಯಿತು.

1886ನೇ ಇಸವಿ ಮೇ ಒಂದು—ಶ್ರಮಜೀವಿ ವರ್ಗದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡಬೇಕಾದಂತಹ—ಆ ಮಹಾ ಮುಷ್ಕರ ನಡೆಯಿತು. ಸುಮಾರು 5 ಲಕ್ಷ ಕಾರ್ಮಿಕರು ಇದರಲ್ಲಿ ಭಾಗವಹಿಸಿದ್ದರು.

'ಒಗ್ಗಟ್ಟು' ಎಂಬ ಬಂದೂಕಿನಿಂದ 'ಮುಷ್ಕರ' ಎಂಬ ಗುಂಡುಗಳನ್ನು ಹಾರಿಸಬೇಕು; ಶೋಷಣೆಗೆ ಇದಿರಾಗಿ ಗುರಿಯಿಡುವುದಕ್ಕೆ 'ಸಂಘಟನೆ' ಯೆಂಬ ಸಿಪಾಯಿಯನ್ನು ಸೃಷ್ಟಿಸಿಕೊಳ್ಳಬೇಕು ಎಂಬುದನ್ನು ಕಾರ್ಮಿಕ ವರ್ಗ ಮನದಟ್ಟು ಮಾಡಿಕೊಂಡಿತು.

ಬೇಡಿಕೆ ಈಡೇರುವವರೆಗೂ ನಿಲ್ಲದ ಚರಿತ್ರಾರ್ಹ ಹೋರಾಟ

'ಎಂಟು ಗಂಟೆಗಿಂತ ಹೆಚ್ಚಾಗಿ ಒಂದು ನಿಮಿಷವೂ ನಾವು ದುಡಿಯಲಾರೆವು.'

'ಓ! ಮಾಲೀಕ ವರ್ಗವೇ! ಶೋಷಕರ ಕೂಟವೇ! ಈ ಬೇಡಿಕೆಯನ್ನು ಅಂಗೀಕರಿಸು ಇಲ್ಲವಾದರೆ ಜಯ ಪಡೆಯುವವರೆಗೂ ಹೋರಾಡುವೆವು!' ಎಂಬ ಎಚ್ಚರಿಕೆಯನ್ನು ನೀಡಿತು.

ಹೋರಾಟ ಮೇ ಮೂರರವರೆಗೂ ಮೂರು ದಿನಗಳ ಕಾಲ ಶಾಂತಿಯುತವಾಗಿ ನಡೆಯಿತು. ಮಾಲೀಕರಿಗೂ ಮತ್ತವರ ಕೈಗೊಂಬೆಗಳಾಗಿದ್ದ ಅಮೇರಿಕಾ ಸರ್ಕಾರಕ್ಕೂ ರೋಷವುಕ್ಕಿತು, ಹುಚ್ಚು ತಲೆಗೇರಿತು. ನಿರಾಯುಧರಾದ ಕಾರ್ಮಿಕರನ್ನು ಸರ್ಕಾರದ ಪಡೆಗಳು ಸದೆ ಬಡಿದವು. ಗೋಲಿಬಾರ್ ನಡೆಸಿದವು. ಈ ಆಕ್ರಮಣದಲ್ಲಿ ಆರು ಜನ ಕಾರ್ಮಿಕರು ಅಸು ನೀಗಿದರು.

ಈ ಕಗ್ಗೊಲೆಗೆ ಪ್ರತಿಭಟನೆ ಸೂಚಿಸಲು ಮೇ 4ರಂದು ಚಿಕಾಗೋ ನಗರದ ಹೇ ಮಾರ್ಕೆಟ್ ಚೌಕದಲ್ಲಿ ಅಪಾರ ಜನಸಮೂಹ ಮೆರವಣಿಗೆ ನಡೆಸಿತು. ಬಹಿರಂಗ ಸಭೆ ನಡೆಯಿತು. ಆಳುವ ವರ್ಗಕ್ಕೆ ಸಹಿಸಲಾಗಲಿಲ್ಲ.

ಸಭೆ ಮುಕ್ತಾಯದಲ್ಲಿದ್ದಾಗ, ಪೋಲೀಸರು ಸಭೆಯ ಮೇಲೆ ಆಕ್ರಮಣ ನಡೆಸಿದರು. ಆಕ್ರಮಣ 4 ಮಂದಿಯನ್ನು ಆಹುತಿ ತೆಗೆದುಕೊಂಡಿತು.

ಸಾವಿರಾರು ಜನ ಗಾಯಗೊಂಡರು. ಭೀತಿಯನ್ನು ಸೃಷ್ಟಿಸುವ ಮೂಲಕ ಕಾರ್ಮಿಕರನ್ನು ಸೋಲಿಸಬಹುದೆಂಬ ಉದ್ದೇಶದಿಂದ ಹೋರಾಟದ ಮುಂಚೂಣಿಯಲ್ಲಿದ್ದ ನಾಲ್ಕು ಮಂದಿ ಧೀರ ಕಾರ್ಮಿಕರನ್ನು ಫಾರಸನ್ಸ್, ಸ್ಪೀಸ್, ಫಿಶರ್, ಮತ್ತು ಎಂಗೆಲ್ಸ್‌ರನ್ನು ಗಲ್ಲಿಗೇರಿಸಿ, ಸರಕಾರ ತನ್ನ ರಕ್ತಪಿಪಾಸೆಯನ್ನು ತೀರಿಸಿಕೊಂಡಿತು.

ಆ ಧೀರರು ಹರಿಸಿದ ರಕ್ತ ವ್ಯರ್ಥವಾಗಲಿಲ್ಲ. ಇಂದು ಎಂಟು ಗಂಟೆ ಕೆಲಸ ಎನ್ನುವುದು ಸಾರ್ವತ್ರಿಕ ಕಾನೂನಾಗಿದೆ.

ಕಾರ್ಮಿಕ ವರ್ಗಕ್ಕೆ ಸಂಘವೊಂದಿದ್ದರೆ ಸಾಕೆ? ಅದಕ್ಕೊಂದು ನಿಶಾನೆ ಬೇಡವೇ?—ಅಂದು ರಕ್ತದ ಮಡುವಿನಲ್ಲಿ ಮುಳುಗಿದ್ದ ಚಿಕಾಗೋ ಕಾರ್ಮಿಕ ತನ್ನ ಅಂಗಿಯನ್ನು ರಕ್ತದಲ್ಲಿ ಅದ್ದಿ ಮೇಲೆತ್ತಿ ಹಿಡಿದ. ಅದುವೇ ಇಂದು ವಿಶ್ವಾದ್ಯಂತ ಕ್ರಾಂತಿಯ ನಿಶಾನೆಯಾಗಿರುವ, ಕೆಂಬೆಳಕನ್ನು ಚೆಲ್ಲುತ್ತಿರುವ, ವಿಜಯ ಧ್ವಜ! ಕೆಂಪು ಬಾವುಟ!

ಎರಡನೇ ಅಂತರಾಷ್ಟ್ರೀಯ ಸಮ್ಮೇಳನ

ವಿಶ್ವ ಕಾರ್ಮಿಕರಲ್ಲಿ ವರ್ಗ ಪ್ರಜ್ಞೆಯನ್ನೂ, ಐಕ್ಯತೆಯನ್ನೂ, ಸ್ವಾಭಿಮಾನವನ್ನೂ ಸೃಷ್ಟಿಸಿದ ಅದ್ವಿತೀಯ ದಿನವಾದ್ದರಿಂದ — 1889ನೇ ಇಸವಿ ಜುಲೈ 14ರಲ್ಲಿ ಪ್ಯಾರಿಸ್‌ನಲ್ಲಿ ನಡೆದ ಫ್ರೆಂಚ್ ಕ್ರಾಂತಿಯ ಶತಮಾನೋತ್ಸವದ ಸಂದರ್ಭದಲ್ಲಿ ಮೇ ಒಂದನೇ ತಾರೀಖನ್ನು ವಿಶ್ವ ಕಾರ್ಮಿಕರ ಐಕ್ಯತಾ ದಿನವನ್ನಾಗಿ ಆಚರಿಸಬೇಕೆಂದು ತೀರ್ಮಾನಿಸಲಾಯಿತು.

ಅಂದಿನಿಂದಲೂ ಜಗತ್ತಿನಾದ್ಯಂತ ಮೇ ಒಂದನ್ನು ಆಚರಿಸಲಾಗುತ್ತಿದೆ.

ಭಾರತದಲ್ಲಿ ಮೊಟ್ಟ ಮೊದಲು 1923ರಲ್ಲಿ ಮದ್ರಾಸಿನಲ್ಲಿ ಎಂ. ಸಿಂಗಾರ ವೇಲ್‌ರವರು 'ಮೇ ದಿನ' ಸಮಾರಂಭವನ್ನು ಉದ್ಘಾಟಿಸಿದರು.

ಇಂದು ಕಾರ್ಮಿಕರು ತಮ್ಮನ್ನು ಅಂಗೀಕರಿಸಬೇಕು ಎಂಬ ದೃಷ್ಟಿಯಿಂದ ಬಂಡವಾಳಶಾಹೀ ಪಕ್ಷಗಳೂ ಕೂಡ ಮೇ ದಿನವನ್ನಾಚರಿಸುತ್ತಿವೆ.

★

ತೀರ್ಥಹಳ್ಳಿ :

ಬೀಡಿ ಕಾರ್ಮಿಕರ ಸೌಲತ್ತುಗಳ ಬಗ್ಗೆ ಒಪ್ಪಂದ

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಸುತ್ತಮುತ್ತಲಿನ ಪ್ರದೇಶಗಳ ಬೀಡಿ ಕಾರ್ಮಿಕರು ಬೀಡಿ ಮಾಲೀಕರಿಂದ ಆಗುತ್ತಿರುವ ವಂಚನೆ ಮತ್ತು ಕಾಯಿದೆ ಬದ್ಧ ಸೌಲತ್ತುಗಳನ್ನು ಕೊಡದೇ ತೀರಾ ಕಡಿಮೆ ಕೂಲಿ ಕೊಟ್ಟು ದುಡಿಸುತ್ತಿರುವುದನ್ನು ಮನಗಂಡು ಸಂಘಟಿತರಾಗಿ, ಈ ಹಿಂದೆ ಹೊಸತಾಗಿ ಸಂಘವನ್ನು ರಚಿಸಿ ತನ್ಮೂಲಕ ಬೇಡಿಕೆಗಳ ಪಟ್ಟಿಯನ್ನು ಸಂಬಂಧಪಟ್ಟ ಕಾರ್ಮಿಕ ಇಲಾಖೆಯ ಅಧಿಕಾರಿಗಳಿಗೆ ಕಳುಹಿಸಿಕೊಟ್ಟಿದ್ದರು.

ಅನಂತರ ಬೀಡಿ ಕಾರ್ಮಿಕರು ಸಂಘಟಿತ ಹೋರಾಟದ ಕಾರ್ಯಕ್ರಮಕ್ಕೆ ಸಿದ್ಧತೆ ನಡೆಸುತ್ತಿರುವುದನ್ನು ಕಂಡು ಶಿವಮೊಗ್ಗ ಜಿಲ್ಲಾ ಕಾರ್ಮಿಕಾಧಿಕಾರಿ ಹಾಗೂ ಸಂಧಾನಾಧಿಕಾರಿಯವರು ತೀರ್ಥಹಳ್ಳಿಯ ಕಾರ್ಮಿಕ ನಿರೀಕ್ಷಕರ ಕಛೇರಿಯಲ್ಲಿ ಮಾತುಕತೆಗೆ ಬೀಡಿ ಮಾಲೀಕರ ಪ್ರತಿನಿಧಿಗಳನ್ನು ಮತ್ತು ಕಾರ್ಮಿಕ ಪ್ರತಿನಿಧಿಗಳನ್ನು ಕರೆದರು. ತಾ.6-4-83ರಂದು ತೀರ್ಥಹಳ್ಳಿಯಲ್ಲಿ ಬೀಡಿ ಮಾಲಿಕರ ಪ್ರತಿನಿಧಿಗಳು ಹಾಜರಿದ್ದರು. ಬೀಡಿ ಕಾರ್ಮಿಕರ ಸಂಘದ ಪ್ರತಿನಿಧಿಗಳಾಗಿ, ಸಂಘದ ಅಧ್ಯಕ್ಷ ಕಾ। ಕೆ. ಎಂ. ಶ್ರೀನಿವಾಸ, ಕಾರ್ಯದರ್ಶಿಯವರಾದ ಜಾವಗಲ್ ವಿಜಯಕುಮಾರ್, ಉಪಾಧ್ಯಕ್ಷರಾದ ಮಹಮದ್ ಇಸ್ಮಾಯಿಲ್ ಮತ್ತು ಇತರ ಐದು ಮಂದಿ ಸಮಿತಿ ಸದಸ್ಯರೂ ಭಾಗವಹಿಸಿದ್ದರು. ದಕ್ಷಿಣ ಕನ್ನಡ ಜಿಲ್ಲಾ ಸಿ.ಐ.ಟಿ.ಯು.ವಿನ ಕಾರ್ಯದರ್ಶಿ ಹಾಗೂ ಜಿಲ್ಲಾ ವರ್ಕರ್ಸ್ ಫೆಡರೇಷನ್ ಇದರ ಉಪಾಧ್ಯಕ್ಷರಾದ ಕಾಮ್ರೇಡ್ ಕೆ. ಶಂಕರ್‌ರವರು ಮಾತುಕತೆಯಲ್ಲಿ ಭಾಗವಹಿಸಿದ್ದರು.

ತಾ. 1–1–82ರಿಂದ ಸರಕಾರದ ಕನಿಷ್ಟ ಕೂಲಿ ಪ್ರಕಟಣೆಯಂತೆ ಸಾವಿರ ಬೀಡಿ ಕಟ್ಟಿದ್ದಕ್ಕೆ ರೂ. 7–40, 1981–82 ಈ ಸಾಲಿನ ಬೋನಸ್, ಹೆರಿಗೆ ಭತ್ತೆ, ರಜಾ ಸಂಬಳ ಹಾಗೂ ಇತರ ಕಾಯಿದೆ ಪ್ರಕಾರ ಸಿಗಬೇಕಾದ ಸೌಲತ್ತುಗಳನ್ನು ಕೊಡುವುದಾಗಿ ಮಾಲೀಕರು ಒಪ್ಪಿ ಒಪ್ಪಂದಕ್ಕೆ ರುಜು ಹಾಕಿರುತ್ತಾರೆ. ತಾ. 1–4–83ರಿಂದ "ಕಾರ್ಮಿಕರ ಭವಿಷ್ಯ ನಿಧಿ"ಗೆ ಸದಸ್ಯರಾಗಿ ನೋಂದಾಯಿಸಲು ಕೂಡಾ ಮಾಲೀಕ ವರ್ಗದವರು ಒಪ್ಪಿಕೊಂಡಿರುತ್ತಾರೆ. ಈ ಒಪ್ಪಂದವು ಮೇಲಿನ ಎಲ್ಲಾ ಷರತ್ತುಗಳೊಡನೆ ಸರಕಾರವು ಕಾರ್ಮಿಕರಿಗೆ ವಿವಿಧ ಸೌಲಭ್ಯಗಳನ್ನು ಪುನಃ ಪರಿಶೀಲಿಸಿ ಜಾರಿಗೊಳಿಸುವವರೆಗೂ ಚಾಲ್ತಿಯಲ್ಲಿರುತ್ತದೆ.

ಟೆಲಿಫೋನ್ ಎಕ್ಸ್‌ಛೇಂಜಿನ ತಲೆನೋವು

ಜನರೊಳಗಿನ ಸಂಪರ್ಕಕ್ಕೆ, ಅತಿ ತುರ್ತು ಸುದ್ದಿಗಳನ್ನು ತಲುಪಿಸಲಿಕ್ಕೆ ಸಹಾಯವಾಗುವ ಒಂದೇ ಒಂದು ಖಾತೆ ಟೆಲಿಫೋನ್ ಎಕ್ಸ್‌ಛೇಂಜ್. ಇತ್ತೀಚೆಗೆ ಇದು ತಲೆನೋವನ್ನುಂಟುಮಾಡಿದೆ. ಜನರಲ್ಲಿ ರೇಗೆಬ್ಬಿಸಿದೆ. ಇದೇ ಏಪ್ರಿಲ್ 4 ರಂದು ಪ್ರೀಮಿಯರ್ ಇರಿಗೇಶನ್‌ನ ಸೂಪರ್‌ವೈಸರ್ ಬಿಜಾಪುರದಿಂದ 14 ಫೋನ್ ಕರೆಗಳನ್ನು ಹಚ್ಚಿದ್ದರು. ಒಂದೂ ಫಲಕಾರಿಯಾಗಲಿಲ್ಲ. ಏಪ್ರಿಲ್ 5ರಂದು ಉಡುಪಿಯ ಒಂದೇ ಕಾಲ್ ಬಂತು. ತಾ. 5 ರಂದು ಎನ್. ಕೆ. ಉಪಾಧ್ಯಾಯರು ಬಾಗಲಕೋಟೆಗೆ ಟ್ರಂಕ್‌ಕಾಲ್ ಬುಕ್ ಮಾಡಿ 3 ಗಂಟೆಯ ನಂತರ ಅದನ್ನೇ ರದ್ದುಪಡಿಸಬೇಕಾಯಿತು. ತಾ. 5 ರಂದು ಮತ್ತೆ ಬಾಗಲಕೋಟೆಗೆ ಬುಕ್ ಮಾಡಿದ ಕಾಲ್ ಮೂರೂವರೆ ಘಂಟೆಯಾದರೂ ಸಫಲವಾಗದಿದ್ದುದರಿಂದ ರದ್ದುಪಡಿಸಬೇಕಾಯಿತು. ಇದರಿಂದ ಸಿಟ್ಟಿಗೆದ್ದ ಎನ್. ಕೆ. ಮತ್ತು ಇತರರು ಎಕ್ಸ್‌ಛೇಂಜಿಗೆ ಹೋಗಿ ಗಲಾಟೆ ಮಾಡಬೇಕಾಯಿತು. ಪ್ರತಿಭಟನೆ ಮಾಡಬೇಕಾಯಿತು. ಆಗ ನೌಕರದಾರರು ತಮ್ಮ ತಮ್ಮ ಸಂಕಷ್ಟ ತೋಡಿಕೊಂಡರು. ಬಿಜಾಪುರ ಎಕ್ಸ್‌ಚೇಂಜಿನಲ್ಲಿ 12 ಲೋಕಲ್ ಕಾಲ್ ಬೋರ್ಡುಗಳು, 11 ಟ್ರಂಕ್‌ಕಾಲ್ ಬೋರ್ಡುಗಳೂ ಇವೆ. ಒಟ್ಟು 125 ನೌಕರದಾರರು ಬೇಕಾಗಿದ್ದಾರೆ. ಸರಕಾರ ಮಂಜೂರು ಮಾಡಿರುವುದು 73 ಜನರನ್ನು ಮಾತ್ರ. ತಾ। 4 ರಂದು ಹಾಜರಿದ್ದವರು ನಲವತ್ಮೂರುವರೆ ಜನ. ಮೂರು ನೌಕರರ ಕೆಲಸ ಒಬ್ಬನೇ ಮಾಡಬೇಕಾಗಿದೆ. ಹೆಚ್ಚು ಸ್ಟಾಫ್ ಕೊಟ್ಟಿಲ್ಲ. ಓವರ್ ಟೈಮ್ ಬಂದ್ ಮಾಡಲಾಗಿದೆಯೆಂದು ನೌಕರರ ತಕರಾರು

ಕೇಂದ್ರ ಮಂತ್ರಿಗಳು ನೌಕರದಾರರ ಸಮಸ್ಯೆ ಪರಿಹರಿಸದಿರುವುದರಿಂದ ಜನರಿಗೆ ಬಹಳ ಅನ್ಯಾಯವಾಗುತ್ತಿದೆ. ಶೇ. 60ಕ್ಕೂ ಮೇಲ್ಪಟ್ಟು ಟ್ರಂಕ್ ಕಾಲ್‌ಗಳು ರದ್ದಾಗುತ್ತಿರುವುದರಿಂದ ಕೇಂದ್ರ ಸರಕಾರದ ಉತ್ಪನ್ನದಲ್ಲಿಯೂ ಕಡಿತ.

ಸಾರ್ವಜನಿಕರಿಗೆ ಅನುಕೂಲತೆ ಮಾಡಿಕೊಡದ ಇಂದಿರಾ ಸರಕಾರ, ನೌಕರದಾರರ ಹಿತಸಾಧಿಸದ ಕಾಂಗ್ರೆಸ್ ಸರಕಾರ ಟೆಲಿಫೋನ್ ಸಂಪರ್ಕ ಒದಗಿಸುವಲ್ಲಿ ಹೇಳತೀರದಷ್ಟು ಅನ್ಯಾಯ ಮಾಡುತ್ತಿದೆ. ಬಿಜಾಪುರದಲ್ಲಿ ಸಾರ್ವಜನಿಕರಿಂದ ಪ್ರತಿಭಟನೆ ನಡೆಯುತ್ತಿದೆ. ಇತರೆಡೆಗಳಲ್ಲೂ ಸಂಘಟಿತ ಚಳುವಳಿ ನಡೆಯುವುದಗತ್ಯ

ಡಿ. ವೈ. ಎಫ್. ಐ.ನ ನಿರುದ್ಯೋಗ ವಿರೋಧಿ ಹೋರಾಟ

—ಎಸ್. ಶಿವರಾಂ

ನಿರುದ್ಯೋಗ ವಿರೋಧಿ ಹೋರಾಟ ಎಂಬುದು ಬಂಡವಾಳಶಾಹಿ ಪದ್ಧತಿಯಲ್ಲಿ ನಿರಂತರವಾದ ಹೋರಾಟ. ಪ್ರತಿ ವರ್ಷ ಮಾರ್ಚ್ 28 ರಂದು ಡಿ. ವೈ. ಎಫ್. ಐ. ನಿರುದ್ಯೋಗ ವಿರೋಧಿ ದಿನಾಚರಣೆಯನ್ನು ಆಚರಿಸುತ್ತಿರುವುದು ಸಂಕೇತ ಮಾತ್ರ.

ನಿರುದ್ಯೋಗ ವಿರೋಧಿ ಹೋರಾಟದಲ್ಲಿ ಅಕ್ಷರಸ್ಥರೂ, ಅನಕ್ಷರಸ್ಥರೂ, ಉದ್ಯೋಗಿಗಳೂ ಹಾಗೂ ನಿರುದ್ಯೋಗಿ ಯುವಜನರನ್ನೂ ಸೇರಿಸಿಕೊಳ್ಳದಿದ್ದರೆ ಅದು ಹೋರಾಟವೇ ಆಗಲಾರದೆಂದು ಡಿ. ವೈ. ಎಫ್. ಐ. ಅರಿತಿದೆ. ಮತ್ತು ಈ ಹೋರಾಟ ಬಂಡವಾಳಶಾಹಿ, ಭೂಮಾಲೀಕ ಹಾಗೂ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟ ಸಹ ಆಗುವುದು.

ಏಕೆಂದರೆ, ನಿರುದ್ಯೋಗ, ಅನಕ್ಷರತೆ, ಭೀಕರ ಬಡತನ, ಆರ್ಥಿಕ ಅಸಮಾನತೆ ಬಂಡವಾಳಶಾಹಿ ತತ್ವದ ಉತ್ಪಾದನೆಯಾಗಿರುವುದರಿಂದ ಈ ಹೋರಾಟಕ್ಕೊಂದು ನಿಕಟ ಸಂಬಂಧ ಇದೆ.

ಆಯಾ ಪ್ರದೇಶ, ಕಾರ್ಖಾನೆಗಳಲ್ಲಿ ಉದ್ಯೋಗಿಗಳಿಗೂ, ನಿರುದ್ಯೋಗಿಗಳಿಗೂ ಮತ್ತು ಅಕ್ಷರಸ್ಥರೂ, ಅನಕ್ಷರಸ್ಥರಿಗೂ ಸಂಬಂಧಿಸಿದಂತೆ, ಇರುವ ಸಮಸ್ಯೆಗಳನ್ನು ಪ್ರತ್ಯಕ್ಷಪಡಿಸಿ ಬೇಡಿಕೆಯನ್ನಾಗಿ ಪರಿವರ್ತಿಸುವುದು, ಅದರ ಆಧಿಯಲ್ಲಿ ಯುವಜನರನ್ನು ಹೋರಾಟಕ್ಕಿಳಿಸುವುದು. ಅದನ್ನು ಮಾಡದೆ, ಸಮಸ್ಯೆಗಳ ಹಿಂದಿರುವ ಶೋಷಕ ವಿರಾಟ್ ಶಕ್ತಿಯನ್ನು ಗುರುತಿಸಿದೆ, ನಿರುದ್ಯೋಗ ವಿರೋಧಿ ಹೋರಾಟವೆಂದರೆ ಅದು ಗಾಳಿಯ ಜೊತೆಯಲ್ಲಿ ಗುದ್ದಾಟಕ್ಕಿಳಿದಂತೆ.

ಕೆಲವು ಕಾರ್ಖಾನೆಗಳಲ್ಲಿ ವೃತ್ತಿ ತರಬೇತಿದ್ದಾರ (I.T.C, I.T.I, Apprentice) ಯುವಜನರು ಸಹಸ್ರಾವಧಿಯಲ್ಲಿದ್ದಾರೆ. ಇವರಿಗೆ, ಸರಿಯಾದ ಉಪನ್ಯಾಸಕರ ಸೌಲಭ್ಯಗಳಿರುವುದಿಲ್ಲ. ಅತ್ಯಂತ ಕಡಿಮೆ ಸ್ಟೈಫಂಡ್ ಪಡೆದು ಬದುಕುತ್ತಿದ್ದಾರೆ, ಆದರೆ ಕಾರ್ಮಿಕರ ಜೊತೆಯಲ್ಲಿ ಅಷ್ಟೇ ಬೆವರು ಸುರಿಸುತ್ತಾರೆ. ತರಬೇತಿಯ ನಂತರ ಹೊರದೂಡಲಾಗುತ್ತದೆ.

ಇಲ್ಲಿ ಕಾರ್ಮಿಕರಿಗೆ, ಇವರ ಬಗ್ಗೆ ಕಾಳಜಿ ಇರುವುದಿಲ್ಲ. ಕಾರ್ಮಿಕರು ತಮ್ಮ ಸಮಸ್ಯೆಗಳ ಬಗ್ಗೆ ಸಂಘಟಿತರಾಗಿ ಹೋರಾಟಕ್ಕಿಳಿದಾಗ ಉತ್ಪಾದನೆ ವೃತ್ತಿದಾರರನ್ನು ಅವರ ಸ್ಥಾನದಲ್ಲಿ ನಿಲ್ಲಿಸಿ ನಿರಂತರವಾಗಲು ಮಾಲಿಕ ವರ್ಗ ತಂತ್ರಹೂಡುತ್ತದೆ. ಹೊರಗೆ ಮಾಲೀಕ ವರ್ಗದ ಅನ್ಯಾಯಗಳನ್ನು ಪ್ರತಿಭಟಿಸಿ ಕಾರ್ಮಿಕರು ಚಳುವಳಿ ನಡೆಸುತ್ತಿದ್ದರೆ ಕಾರ್ಖಾನೆಯ ಒಳಗೆ ಉತ್ಪಾದನೆ ನಿರಾತಂಕವಾಗಿರುತ್ತದೆ. ಒಂದು ವೇಳೆ ವೃತ್ತಿ ತರಬೇತಿದಾರರೂ ಕಾರ್ಮಿಕರ ಜೊತೆಯಲ್ಲಿಯೇ ಹೋರಾಟಕ್ಕಿಳಿದರೂ ನಿರುದ್ಯೋಗಿ ಸೈನ್ಯ ಹೊರಗಿರುತ್ತದೆ. ಅದನ್ನು ಉದ್ಯೋಗ ವಿನಿಮಯ ಕೇಂದ್ರಗಳ ಸಹಕಾರದೊಂದಿಗೆ, ಅದಿಲ್ಲದಿದ್ದರೂ ನೇರವಾಗಿಯೇ ಮಾಲೀಕವರ್ಗ ಬಳಸಿಕೊಳ್ಳುತ್ತದೆ. ಹೀಗಾಗಿ ಕಾರ್ಮಿಕರ ಚಳುವಳಿ ದೀರ್ಘಕಾಲವಾಗುತ್ತದೆ. ಬಿದ್ದೇಳುತ್ತ ನಡೆದು ಕೊನೆಗೆ ಕ್ಷೀಣವಾಗುವ ಸಂಭವ ಹೆಚ್ಚಿರುತ್ತದೆ.

ಕಾರ್ಮಿಕ ಸಂಘಟನೆಗಳಲ್ಲಿ ಎಡಪಂಥೀಯ, ಅಂದರೆ ಮಾಲೀಕ ವರ್ಗ ಶಕ್ತಿಯನ್ನು ಕಾರ್ಮಿಕ ವರ್ಗ ಶಕ್ತಿಯಿಂದಲೇ ಹಂತ ಹಂತವಾಗಿ ಸ್ಥಗಿತಗೊಳಿಸಬೇಕೆನ್ನುವ ಕೊನೆಗೆ ಸಮಾಜವಾದಿ ಸಮಾಜದ ಗುರಿಹೊಂದಿರುವ ಸಂಘಟನೆಗಳಿದ್ದರೆ, ಅಂತಹ ಕಾರ್ಖಾನೆಗಳಲ್ಲಿ ಮಾಲೀಕರ ತಂತ್ರ ಫಲಿಸದು.

ಆದರೆ, ಎಡ ಶಕ್ತಿಗಳಿಗಿಂತ, ಬಲ ಶಕ್ತಿಗಳ, ಅಂದರೆ ಅನಕ್ಷರತೆ, ನಿರುದ್ಯೋಗ, ಬಡತನ ಇವೆಲ್ಲ ಯಾವಾಗಲೂ ಇರುವಂತಹುದೇ, ಅವುಗಳನ್ನು ಹೋಗಲಾಡಿಸುವುದು ಅಸಾಧ್ಯ. ಬಡವರೂ ಶ್ರೀಮಂತರೂ, ಇದ್ದರೇನೇ ಅದು ಸಮಾಜವೆಂದು ಹೇಳುವ ಶಕ್ತಿಗಳ ಹಿಂದೆಯೇ ಇಂದಿಗೂ ಭಾರತದ ದುಡಿಯುವವರ್ಗ ಹೆಚ್ಚಿನ ಸಂಖ್ಯೆಯಲ್ಲಿರುವಾಗ ಕಾರ್ಮಿಕರ ರೈತರ, ಜನಸಾಮಾನ್ಯರ ಹೋರಾಟಗಳು ಪ್ರಜಾಸತ್ತಾತ್ಮಕವಾಗಿರದೆ ಸಂಕುಚಿತ ದೃಷ್ಟಿಕೋನವನ್ನು ಹೊಂದಿರುತ್ತವೆ.

ಇಲ್ಲಿ ಬಲ ಪಂಥೀಯ, ಪ್ರಜಾಸತ್ತಾತ್ಮಕವಲ್ಲದ ಮುಖಂಡತ್ವಕ್ಕೆ ಕೊಡಲಿ ಪೆಟ್ಟುಕೊಡುವ ಎಡ ಪಂಥೀಯ ಸಂಘಟನೆಗಳನ್ನು ಬಲಪಡಿಸಲು ಬೆಂಬಲಿಸುವುದು. ನಿರುದ್ಯೋಗಿಗಳೂ, ಇತರ ವಿಭಾಗದ ಉದ್ಯೋಗಿಗಳೂ, ಅನಕ್ಷರಸ್ಥರೂ ಹಾಗೂ ವಿದ್ಯಾರ್ಥಿಗಳನ್ನೂ ಅವರ ಸಮಸ್ಯೆಗಳನ್ನೂ ನಿರೂಪಿಸಿ, ಮನದಟ್ಟುಮಾಡಿ ಈ ಪ್ರಜಾಸತ್ತಾತ್ಮಕ ಹೋರಾಟದಲ್ಲಿ ತರುವುದು.

ಅಂದರೆ ಡಿ.ವೈ.ಎಫ್.ಐ. ಬರಿಯ ನಿರುದ್ಯೋಗಿ ಯುವಜನರ ಸಂಘಟನೆಯಾಗಿರದೆ ಯುವ ರೈತ, ಕಾರ್ಮಿಕ, ಅನಕ್ಷರಸ್ಥ, ಅಕ್ಷರಸ್ಥರ ಸಂಘಟನೆಯಾಗಿದೆ. ಯುವಜನರು ಸಮಾಜದಲ್ಲಿ ಒಂದು ಅಂಗಮಾತ್ರ ಮತ್ತು ಮುಖ್ಯ ಜನವಿಭಾಗ ಆದರೆ ಎಲ್ಲಕ್ಕೂ ಪರಿಹಾರ ಯುವಜನರಿಂದಲೇ ಆಗಲಾರದು. ಸಮಾಜದ ಬೆಳವಣಿಗೆಯ ಚಕ್ರಗಳಂತಿರುವ ರೈತ-ಕಾರ್ಮಿಕರ, ಅವರ ಹೋರಾಟವನ್ನು ಸರಿಯಾದ ಮಾರ್ಗಕ್ಕೆಳೆದು ತಾನೂ ಅದರಲ್ಲಿ ಸಹಭಾಗಿಯಾಗಲು ಹೋಗುವುದೇ ಡಿ. ವೈ. ಎಫ್. ಐ. ನ ಮುಖ್ಯ ಗುರಿ.

ಯುವಜನರಿಗಿರುವ ಮುಖ್ಯ ಸಮಸ್ಯೆಗಳಾದ ನಿರುದ್ಯೋಗ, ಅನಕ್ಷರತೆ, ಉದ್ಯೋಗಿಯಾದರೂ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯಲ್ಲಿ ನಿರುದ್ಯೋಗಿಯಾಗುವ ಪರಿಸ್ಥಿತಿ, ಉದ್ಯೋಗದ ಭದ್ರತೆ ಇಲ್ಲದಿರುವುದು. ವಿದ್ಯಾವಂತನಾದರೂ, ನಿಷ್ಪ್ರಯೋಜಕನಾಗುವುದು. ಏಕೆಂದರೆ ಅವೈಜ್ಞಾನಿಕ ಶಿಕ್ಷಣ, ಪ್ರಸ್ತುತ ಬದುಕಿಗೂ ಶಿಕ್ಷಣಕ್ಕೂ ಸಂಬಂಧಿಸದಿರುವಿಕೆ. ವಿಲಿಯ ವಿಲಿಯ ಅನಕ್ಷರತೆ ಹಾಗೂ ವರದಕ್ಷಿಣೆಯ ಪಿಡುಗು,

ಇಲ್ಲಿ ಭೂಮಾಲೀಕ, ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿ ಶಕ್ತಿಗಳು ತಮ್ಮ ಬಿಕ್ಕಟ್ಟುಗಳನ್ನು ಮುಚ್ಚಿಡಲು ಯುವಜನರಿಗೆ ರಾಷ್ಟ್ರದಲ್ಲಿ ಸಂಬಳವಿಲ್ಲದ ಉದ್ಯೋಗವನ್ನು ಕಲ್ಪಿಸಿಕೊಟ್ಟಿವೆ.

ಈ ಉದ್ಯೋಗಗಳೆಂದರೆ, ಭಾರತೀಯರನ್ನೇ ಒಬ್ಬರ ವಿರುದ್ಧ ಮತ್ತೊಂದು ಪಂಗಡವನ್ನು ಎತ್ತಿಕಟ್ಟುವುದು. ಪ್ರತ್ಯೇಕ ರಾಜ್ಯದ ಹೋರಾಟ ನಡೆಸುವುದು. ಅಸ್ಸಾಂನಲ್ಲಿ ಭಾರತೀಯರೇ ವಿದೇಶೀಯರಾಗುವುದು. ಜಾತಿ ಜಾತಿಗಳಿಗೂ, ಬೇರೆ ಬೇರೆ ಸಂಘಟನೆ ಮಾಡಿಕೊಂಡು ಹೋರಾಟ ನಡೆಸುವುದು. ಹಿಂದೂ ಮುಸ್ಲಿಮರು ಸಾಮರಸ್ಯದಿಂದ ಬದುಕುವ ಕಡೆಯಲ್ಲೆಲ್ಲಾ ಕಿಚ್ಚನ್ನು ಹಚ್ಚುವುದು. ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ವಿರೋಧಿ ಸರ್ಕಾರಗಳೂ ಮತ್ತು ಮಂತ್ರಿಗಳನ್ನು ಉರುಳಿಸುವ ಹೋರಾಟ, ಕಾರ್ಮಿಕರ ಐಕ್ಯತಾ ಹೋರಾಟದಲ್ಲಿ ತಮಿಳರೂ, ಮಲಯಾಳಿಗಳೂ, ಕನ್ನಡಿಗರೂ, ಮರಾಠಿಗರೆಂದು ಒಬ್ಬರ ಪರವಿದ್ದು ಉಳಿದೆಲ್ಲ ಭಾಷಿತರ ವಿರುದ್ಧ ಹೋರಾಟ ನಡೆಸುವುದು ಮುಂತಾದುವೇ ಈ ಉದ್ಯೋಗಗಳು.

ಈ ಸಂಕುಚಿತ, ಅಲ್ಪಕಾಲಿಕ, ಉದ್ಯೋಗಗಳಿಂದ ಯುವಜನರನ್ನು ಬಿಡಿಸುವುದೇ ಡಿ. ವೈ. ಎಫ್. ಐ.ನ ನಿರುದ್ಯೋಗ ವಿರೋಧಿ ಹೋರಾಟ. ಅಂದರೆ ಇದು ಭೂಮಾಲೀಕ, ಬಂಡವಾಳಶಾಹಿ ಹಾಗೂ ಸಾಮ್ರಾಜ್ಯಶಾಹಿ ವಿರೋಧೀ ಡಿ. ವೈ. ಎಫ್. ಐ.ನ ಹೋರಾಟವೆಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ.

ನಿರುದ್ಯೋಗ ವಿರೋಧಿಹೋರಾಟವೆಂದರೆ, ಹಲವು ಕಾರ್ಖಾನೆಗಳಲ್ಲಿ ಒಬ್ಬ ಕಾರ್ಮಿಕ ಎರಡು ಮೂರು ಯಂತ್ರವನ್ನು ನೋಡಿಕೊಳ್ಳುತ್ತಾನೆ. ಹತ್ತಿ ಗಿರಣಿಗಳಲ್ಲಿ ಹತ್ತರಿಂದ ಹದಿನೈದು ಮಗ್ಗಗಳನ್ನು ಒಬ್ಬನೇ ವ್ಯವಸ್ಥೆ ಮಾಡುತ್ತಿರುತ್ತಾನೆ. ಇಲ್ಲಿ ಕಾರ್ಮಿಕರ ಹಕ್ಕು ಬಾಧ್ಯತೆಗಳಿಗೆ ಧಕ್ಕೆ ಬರದಂತೆ ನೋಡಿಕೊಂಡು ಹೆಚ್ಚಾಗಿ ಉದ್ಯೋಗ ಲಭಿಸಬಹುದಾದ ಸ್ಥಳಗಳಲ್ಲಿ ನಿರುದ್ಯೋಗಿಗಳನ್ನು ಸೇರಿಸಲು ಒತ್ತಾಯ ತರುವುದು. ಇದಕ್ಕೆ ಅದೇ ಕಾರ್ಖಾನೆಯ ಕಾರ್ಮಿಕರನ್ನು ಇತರ ಕಾರ್ಮಿಕ ವಿಭಾಗವನ್ನು ಬೆಂಬಲಿಸಲು ಒತ್ತಾಯ ತರಬೇಕಾಗುತ್ತದೆ.

ತಾಲ್ಲೂಕ್, ಜಿಲ್ಲಾ ಕೇಂದ್ರಗಳಲ್ಲಿ ಕೈಗಾರಿಕೆ, ಕಾರ್ಖಾನೆಗಳನ್ನು ಸ್ಥಾಪಿಸುವುದು ಸ್ಥಳೀಯರಿಗೆ ಆದ್ಯತೆ ನೀಡುವುದು. ಹಳ್ಳಿ ಹಳ್ಳಿಗೂ ಶಾಲೆಗಳಿಗಾಗಿ ಹೋರಾಟ ನಡೆಸುವುದು. ಎಸ್. ಎಸ್. ಎಲ್. ಸಿ.ಯವರೆಗೂ ಉಚಿತ ಶಿಕ್ಷಣ ನೀಡುವುದು. ಶಿಕ್ಷಣ ವೈಜ್ಞಾನಿಕವಾಗಿರುವುದು ಮತ್ತು ವೃತ್ತಿಪರವನ್ನಾಗಿಸುವುದು.

ಗ್ರಾಮೀಣ ಬಡವರಿಗೆ, ಸಣ್ಣ ಪುಟ್ಟ ಹಿಡುವಳಿದಾರರಿಗೆ ಕೂಲಿ ಹೆಚ್ಚಳವಾದರೆ ಅವರ ಮಕ್ಕಳು ತಾನಾಗಿಯೇ ಶಾಲೆಗೆ ಕಲಿಯಲು ಬರುತ್ತಾರೆ. ಭೂರಹಿತ ಜನತೆಗೆ ಭೂಮಿಗಾಗಿ ಹೋರಾಡುವ ರೈತ ಸಂಘಗಳಿಗೆ ಎಲ್ಲಾ ರೀತಿಯ ಬೆಂಬಲ ಕೊಡುವುದು. ಸಂಘಟನೆ ಇಲ್ಲದ ಪ್ರದೇಶಗಳಲ್ಲಿ ಅಂತಹ ರೈತ ಸಂಘ ಬೆಳೆಯಲು ಕೆಲಸ ಮಾಡುವುದು.

ಹೀಗೆ ಚಳುವಳಿಯನ್ನು ವಿಸ್ತರಿಸಿದಾಗ ಬಲಶಕ್ತಿಗಳ ಹಿಡಿತದಲ್ಲಿರುವ ಯುವಜನತೆ ತಮ್ಮ ಸ್ವಂತ ಸಮಸ್ಯೆಗಳತ್ತ ಮೊದಲು ಗಮನ ನೀಡುತ್ತಾರೆ ಮತ್ತು ಬಲಶಕ್ತಿಗಳತ್ತ ಹೊಸ ಯುವ ಪೀಳಿಗೆ ಹೋಗುವುದನ್ನು ತಡೆಗಟ್ಟಿದಂತಾಗುತ್ತದೆ. ಬಲ ಶಕ್ತಿಗಳ ಹಿಡಿತದಲ್ಲಿರುವ ಯುವಜನರು ಜನಸಂಖ್ಯೆಯ ದೃಷ್ಟಿಯಲ್ಲಿ ಅತ್ಯಲ್ಪ. ರಾಜಕೀಯೇತರ ಯುವಜನರು ಬಹುಸಂಖ್ಯೆ ಎಂಬುದನ್ನರಿತಿರುವ DYFI ತನ್ನೆಲ್ಲಾ ಸಂಘಟನಾ ಶಕ್ತಿಯನ್ನು ರಾಜಕೀಯವಿಲ್ಲದವರ ಕಡೆ ಕೇಂದ್ರೀಕರಿಸುವುದು. ನಿರುದ್ಯೋಗ ವಿರೋಧಿ ಎಂದರೆ ಇದೇ ಆ ಹೋರಾಟ.

ರಾಣೆಬೆನ್ನೂರು :

ಯಶಸ್ವೀ ಧರಣೆ ಮುಷ್ಕರ

ರಾಣೆಬೆನ್ನೂರು ತಾಲ್ಲೂಕು ತುಮ್ಮಿನಕಟ್ಟೆ ಗ್ರಾಮದ ಪಂಚಾಯ್ತಿ ಛೇರ್ಮನ್ ಬಿ. ಸಿ. ತೇಲಗಾರ ಮತ್ತು ಟಿ. ಡಿ. ಬಿ. ಮೆಂಬರ್ ಡಿ. ಕೆ. ಕಠಾರಿ ಇವರ ಮೇಲಿನ ಆಪಾದನೆಗಳ ಮತ್ತು ಲೆಕ್ಕ-ಪತ್ರಗಳ ಹಾಗೂ ಊರಿನ ಅವಶ್ಯಕ ಬೇಡಿಕೆಗಳಾದ ನಿರ್ಗತಿಕರಿಗೆ ಜನತಾ ಮನೆ, ಶಾಲೆ, ಪಂಚಾಯಿತಿ ಕಟ್ಟಡ. ಬಸ್‌ಸ್ಟ್ಯಾಂಡ್, ಹೆರಿಗೆ ಆಸ್ಪತ್ರೆ, ಆಸ್ಪತ್ರೆಯಲ್ಲಿ ಡಾಕ್ಟರು ಸರಿಯಾಗಿ ಕೆಲಸಮಾಡದಿರುವುದು, ಕಾಲುವೆ, ಸರಕಾರಿ ಬಸ್ ಸಂಪರ್ಕ, ನೀರಾವರಿ ಸೌಲಭ್ಯ, ಸರ್ಕಾರದಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಅಗ್ಗದರಗಳ ಅಂಗಡಿಗಳ ಸ್ಥಾಪನೆ, ಕಟ್ಟಿಗೆ ಡಿಪೋ ಮಂಜೂರಾತಿ, ಅಲ್ಲದೇ ಸ್ವಾತಂತ್ರ್ಯ ದೊರಕಿದಾಗಿನಿಂದ ಕೈಗಾರಿಗೆ ಮತ್ತು ಸಂಪತ್ತು ಪಟ್ಟಣಗಳಲ್ಲಷ್ಟೇ ಕೇಂದ್ರೀಕೃತವಾಗಿದ್ದು ಗ್ರಾಮಗಳನ್ನು ಸಂಪೂರ್ಣ ಕಡೆಗಾಣಿಸಿದ್ದರ ವಿರುದ್ಧ ಸಂಬಂಧಿಸಿದ ಅಧಿಕಾರಿಗಳವರಿಗೆ, ಸರ್ಕಾರಕ್ಕೆ ಮನವಿ ಸಲ್ಲಿಸುತ್ತಾ ಬಂದಿದ್ದರೂ ನಿರ್ಲಕ್ಷ್ಯ ರೀತಿ ತಳೆದದ್ದರಿಂದ ತಾ. 30-3-83 ರಿಂದ ಸಂಘದ ಮತ್ತು ಸಾರ್ವಜನಿಕರ ಪರವಾಗಿ ಕಾರ್ಯದರ್ಶಿ ಎಸ್. ಎಫ್. ಕ್ಯಾದಗಿರವರ ಮುಖಂಡತ್ವದಲ್ಲಿ ಧರಣಿ ಮುಷ್ಕರ ನಡೆಸಿ, ಯಶಸ್ವಿ ಹೋರಾಟ ನಡೆಸಲಾಗಿ ಶಾಸಕರಾದ ಶ್ರೀ ಬಿ. ಜಿ. ಪಾಟೀಲರು, ಬಿ. ಡಿ. ಓ. ಸಾಹೇಬರು ತಹಶೀಲ್ದಾರ್‌ರವರು, ಪಿ. ಎಸ್. ಐ. ರವರು ದಿ.7-4-83ರಂದು ಮುಷ್ಕರ ನಡೆದ ಸ್ಥಳಕ್ಕೆ ಬಂದು ಸಾರ್ವಜನಿಕ ಕಾರ್ಮಿಕರ ಮತ್ತು ಕಾರ್ಯದರ್ಶಿ ಎಸ್. ಎಫ್. ಕ್ಯಾದಗಿಯವರ ಸಮಕ್ಷಮ ದೀರ್ಘ ಚರ್ಚೆ ನಡೆಸಿ, ಆಪಾದನೆಗಳ ಮತ್ತು ಜನತಾ ಮನೆಗಳ ಮಂಜೂರಾತಿಯಲ್ಲಿ ಆದ ಪಕ್ಷಪಾತಗಳನ್ನು ತನಿಖೆ ಮಾಡುತ್ತೇವೆ ಎಂದು ಮತ್ತು ಬೇಡಿಕೆಗಳನ್ನು ಸರಕಾರದ ಮೂಲಕ ಒತ್ತಾಯಿಸಿ ಸರ್ವ ಪ್ರಯತ್ನ ಮಾಡಿ ಬೇಗ ಈಡೇರಿಸುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರಿಂದ ಮುಷ್ಕರವನ್ನು ಮುಕ್ತಾಯಗೊಳಿಸಲಾಯಿತು.

ಭಾರತದ ಆಹಾರ ನಿಗಮದಲ್ಲಿ ಕರ್ನಾಟಕದ ನಿರುದ್ಯೋಗಿ ಪದವೀಧರರಿಗೆ ಕೆಲಸ ನೀಡಬೇಕು

ಭಾರತ ಆಹಾರ ನಿಗಮ ಕರ್ನಾಟಕ ರೀಜಿಯನ್ನಿನಲ್ಲಿ ಖಾಲಿ ಇರುವ ಹುದ್ದೆಗಳಿಗೆ ಸ್ಥಳೀಯ ನಿರುದ್ಯೋಗಿ ಅಭ್ಯರ್ಥಿ ಯುವಜನರಿಗೆ, ಅಂದರೆ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಹೆಸರು ನೊಂದಾಯಿಸಿರುವವರಿಗೆ ಉದ್ಯೋಗ ನೀಡಬೇಕಾದುದು ನ್ಯಾಯವಾಗಿದೆ.

ಇದಕ್ಕೆ ವ್ಯತಿರಿಕ್ತವಾಗಿ ಎಫ್.ಸಿ.ಐ.ನ ಕರ್ನಾಟಕ ಪ್ರಾದೇಶಿಕ ಅಧಿಕಾರಿಗಳು ಆಂಧ್ರ ಪ್ರದೇಶದಿಂದ ಸುಮಾರು 35 ಹುದ್ದೆಗಳಿಗೆ ನೇರವಾಗಿ ಹುದ್ದೆ ನೀಡಲು ಪ್ರಯತ್ನಿಸುತ್ತಿರುವುದು ದುರದೃಷ್ಟಕರ ಮತ್ತು ಖಂಡನೀಯ.

ಇದರಿಂದ ಕರ್ನಾಟಕದ ನಿರುದ್ಯೋಗಿಗಳಿಗೆ ಅನ್ಯಾಯವಾಗುವುದು ಸ್ಪಷ್ಟವಿದೆ ಮತ್ತು ಈ ಅಧಿಕಾರಿಗಳು ಕರ್ನಾಟಕದ ಹಿತಾಸಕ್ತಿಗಳಿಗೆ ವಿರೋಧವಾಗಿದ್ದಾರೆಂದು ತಿಳಿಯಬೇಕಾಗುತ್ತದೆ

ಅಧಿಕಾರಿಗಳು ಈ ತಾರತಮ್ಯವನ್ನು ಬಿಟ್ಟು ತಕ್ಷಣ ಕರ್ನಾಟಕದ ನಿರುದ್ಯೋಗಿಗಳಿಗೆ ಆದ್ಯತೆ ನೀಡಬೇಕು. ಇಲ್ಲವಾದಲ್ಲಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ.) ಬೆಂಗಳೂರು ಜಿಲ್ಲಾ ಸಮಿತಿಯು ಈ ಅನ್ಯಾಯದ ವಿರುದ್ಧ ನೇರವಾದ ಹೋರಾಟಕ್ಕಿಳಿಯುತ್ತದೆ ಎಂಬುದಾಗಿ ಕಾರ್ಯದರ್ಶಿ ಕಾ। ಎಸ್. ಶಿವರಾಂ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂತರಾಷ್ಟ್ರೀಯ :

ಸರ್ವಾಧಿಕಾರಿಯಾಗುತ್ತಿರುವ ಜಯವರ್ಧನೆ

1983ರ ಫೆಬ್ರುವರಿ 4ರಂದು ಆರು ವರ್ಷಗಳ ಕಾಲಾವಧಿಯವರೆಗೆ 2ನೇ ಬಾರಿಗೆ ಜೆ. ಆರ್. ಜಯವರ್ಧನೆ ಅಧ್ಯಕ್ಷ ಪೀಠವನ್ನು ಏರುವ ಮೂಲಕ ಶ್ರೀಲಂಕವು ಅಭದ್ರತೆ ಮತ್ತು ಬಿಕ್ಕಟ್ಟಿನ ಪರಿಸ್ಥಿತಿಯನ್ನು ಎದುರಿಸುವಂತಾಗಿದೆ. ಅಧ್ಯಕ್ಷನಾಗಿ ಜಯವರ್ಧನೆ ಪ್ರತಿಷ್ಠಾಪಿಸಲ್ಪಟ್ಟಿರುವುದೇ ಪಾರ್ಲಿಮೆಂಟರಿ ಪ್ರಜಾಪ್ರಭುತ್ವವನ್ನು ಬದಿಗೆ ತಳ್ಳಿ ಅಧ್ಯಕ್ಷೀಯ ಮಾದರಿ ಸರಕಾರಕ್ಕೆ ಕಾರಣೀಭೂತವಾಗಿದೆ. ಸಂವಿಧಾನಕ್ಕೆ ಕೆಲವಾರು ತಿದ್ದುಪಡಿಗಳನ್ನು ತಂದಿರುವ ಜಯವರ್ಧನೆ ಪಾರ್ಲಿಮೆಂಟನ್ನು ರಬ್ಬರ್ ಸ್ಟಾಂಪನ್ನಾಗಿ ಪರಿವರ್ತಿಸಿದ್ದಾರೆ ಮಾತ್ರವಲ್ಲ, ಎಲ್ಲಾ ಪ್ರಮುಖ ಅಧಿಕಾರಗಳು ಅಧ್ಯಕ್ಷನ ಕೈಯಲ್ಲಿರುವಂತೆ ಮಾಡಿದ್ದಾರೆ.

1977ರಲ್ಲಿ ಸಂಯುಕ್ತ ರಾಷ್ಟ್ರೀಯ ಪಕ್ಷವು ಚುನಾವಣೆಯಲ್ಲಿ ಗೆದ್ದು ಜಯವರ್ಧನೆ ಅಧ್ಯಕ್ಷರಾದಾಗಿನಿಂದ ಶ್ರೀಲಂಕಾದ ಆರ್ಥಿಕತೆಯನ್ನು ವಿದೇಶಿ ಗುತ್ತೇದಾರಿ ಸಂಸ್ಥೆಗಳಿಗೆ ಮತ್ತು ಅಂತರಾಷ್ಟ್ರೀಯ ಹಣಕಾಸು ನಿಧಿ (IMF) ಗೆ ಮಾರಾಟ ಮಾಡುವ, ಒತ್ತೆಯಿಡುವ ದಂಧೆಯನ್ನು ಆರಂಭಿಸಿದರು. ಈ ನೀತಿ ಯಶಸ್ವಿಯಾಗಲು ಈತ 1978ರಲ್ಲಿ ಸಂವಿಧಾನಕ್ಕೆ ತಿದ್ದುಪಡಿ ತಂದು ಅಧ್ಯಕ್ಷ ಪದವಿ ಹುಟ್ಟುಹಾಕಿಸಿ, ಸಂಸತ್ತನ್ನು ಕೆಳಗಿಳಿಸಲಾಯಿತು. ಟ್ರಿನ್‌ಕಮಾಲಿಯನ್ನು ಅಮೇರಿಕಾದ ನೌಕಾದಳದ ಆಡಿಪಾಯವನ್ನಾಗಿ ಮಾಡುವ ಯೋಜನೆಯನ್ನು ಈತ ಹೊಂದಿರುವುದಾಗಿ ವರದಿಗಳು ಹೇಳುತ್ತಿವೆ. ಶ್ರೀಲಂಕಾದಲ್ಲಿ ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ನಾಲ್ಕುಬಾರಿ ತುರ್ತು ಪರಿಸ್ಥಿತಿಯನ್ನು ಜಯವರ್ಧನೆ ಘೋಷಿಸಿದರು.

ಅಧ್ಯಕ್ಷರಾಗಿ ಪುನರಾಯ್ಕೆ

ತನ್ನ ಈ ಎಲ್ಲಾ ನೀತಿಗಳು, ವಿರೋಧವನ್ನು ಎದುರಿಸುವ ಸಾಧ್ಯತೆಯನ್ನು ಅರಿತ ಜಯವರ್ಧನೆ, 1984ರ ಫೆಬ್ರವರಿ ತಿಂಗಳವರೆಗೆ ಅಧಿಕಾರದಲ್ಲಿರುವ ಅವಧಿ ಇದ್ದಾಗ್ಯೂ, ಕಳೆದ ವರ್ಷ ಅಕ್ಟೋಬರ್‌ನಲ್ಲೇ ಚುನಾವಣೆ ನಡೆಸಿ ಅಧ್ಯಕ್ಷರಾಗಿ ಆಯ್ಕೆಯಾದರು. ಸಂಸತ್ತಿನ ಚುನಾವಣೆಯನ್ನು ಅಧ್ಯಕ್ಷರ ಚುನಾವಣೆಯಿಂದ ಬೇರ್ಪಡಿಸಲು ಈ ಅವಕಾಶವನ್ನು ಉಪಯೋಗಿಸಿಕೊಂಡರು.

ಎರಡು ಕಾರಣಗಳಿಂದಾಗಿ ಜಯವರ್ಧನೆ ತನ್ನ ಅವಧಿ ಮುಗಿಯುವ ಮೊದಲೇ ಚುನಾವಣೆಯನ್ನು ಎದುರಿಸಲು ಮುಂದಾಗುವಂತೆ ಮಾಡಿತು. ಒಂದನೆಯದಾಗಿ, ಅಂತರಾಷ್ಟ್ರೀಯ ಹಣಕಾಸು ನಿಧಿ, ಜಾಗತಿಕ ಬ್ಯಾಂಕ್‌ನಿಂದ ಬಂದ ಒತ್ತಾಯ, ಇದು ಜಯವರ್ಧನೆಯ ಪಕ್ಷ ಮತ್ತು ಸ್ಥಾನ ಗಟ್ಟಿಯಾಗಿ ಉಳಿಯುವುದನ್ನು ಬಯಸಿತ್ತು. ಮತ್ತೊಂದು ಕಾರಣವೆಂದರೆ ಈ ಸಮಯದಲ್ಲಿ ವಿರೋಧ ಪಕ್ಷಗಳು ಅಸ್ವಸ್ಥಗೊಂಡಿದ್ದವು. ಇದರೊಂದಿಗೆ ಸಿರಿಮಾವೋ ಬಂಡಾರನಾಯ್ಕೆಯವರನ್ನು ಆಕೆಯ ಆಡಳಿತ ಕಾಲದಲ್ಲಿ ಅಧಿಕಾರವನ್ನು ದುರುಪಯೋಗ ಮಾಡಲಾಯಿತು ಎಂಬ ಕಾರಣವನ್ನು ಹೊರಿಸಿ 1977ರಿಂದ ಏಳು ವರ್ಷಗಳ ಕಾಲ ನಾಗರಿಕ ಹಕ್ಕುಗಳಿಂದ ವಂಚಿಸಲಾಗಿತ್ತು. ವಿರೋಧ ಪಕ್ಷಗಳಿಗೆ ಹೆಚ್ಚು ಸಮಯಾವಕಾಶ ನೀಡಿದಲ್ಲಿ ಅವು ಸಂಘಟಿತಗೊಳ್ಳುವ ಸಾಧ್ಯತೆ ಇದ್ದು ತನಗೆ ಅಪಾಯವಿರುವುದನ್ನು ಜಯವರ್ಧನೆ ಲೆಕ್ಕಹಾಕಿದ್ದರು.

ಚಿಂದಿಗೊಂಡಿರುವ ವಿರೋಧಿ ಬಲ

ಅಧ್ಯಕ್ಷ ಚುನಾವಣೆಯಲ್ಲಿ ಸರ್ವಸಮ್ಮತವಾದ ಓರ್ವ ಅಭ್ಯರ್ಥಿಯನ್ನು ನಿಲ್ಲಿಸಲು ವಿರೋಧ ಪಕ್ಷಗಳಿಗೆ ಸಾಧ್ಯವಾಗಲಿಲ್ಲ. ಈ ಕಾರಣದಿಂದಾಗಿ ಚುನಾವಣಾ ಕಣದಲ್ಲಿ ಏಳು ಜನ ಅಭ್ಯರ್ಥಿಗಳಿದ್ದರು. ಚುನಾವಣಾ ಫಲಿತಾಂಶ ಜಯವರ್ಧನೆಗೆ ಪರವಾಗಿ ಬಂದು — ಶೇಕಡ 52.91 ಮತಗಳಿಂದ ವಿಜೇತರಾದರು. ಆದರೆ ಮತಚಲಾಯಿಸಲ್ಪಟ್ಟ ಲೆಕ್ಕಾಚಾರದಲ್ಲಿ ಜಯವರ್ಧನೆ ಪಕ್ಷ 250,000 ಮತಗಳನ್ನು ಪಡೆದು ಸುಧಾರಿಸಿಕೊಂಡಿದ್ದರೆ ಬಂಡಾರನಾಯ್ಕೆಯವರ ಪಕ್ಷ (ಶ್ರೀಲಂಕ ಫ್ರೀಡಮ್ ಪಾರ್ಟಿ) 750,000 ದಷ್ಟು ಹೆಚ್ಚು ಮತಗಳನ್ನು ಪಡೆದು ತನ್ನ ಸ್ಥಿತಿಯನ್ನು ಉತ್ತಮಪಡಿಸಿಕೊಂಡಿತು. ಒಮ್ಮತದ ಅಭ್ಯರ್ಥಿಯನ್ನು ನಿಲ್ಲಿಸಿದಲ್ಲಿ ವಿರೋಧ ಪಕ್ಷಗಳು ಜಯಿಸುವ ಸಾಧ್ಯತೆ ಬಹಳಷ್ಟಿತ್ತು. ಮಾತ್ರವಲ್ಲ ಚುನಾವಣೆ ಮುಗಿಯುತ್ತಿದ್ದಂತೆ ಜಯವರ್ಧನೆ ತುರ್ತು ಪರಿಸ್ಥಿತಿಯನ್ನು ಘೋಷಿಸಿದರು.

ಅಧ್ಯಕ್ಷರಾಗಿ ಆಯ್ಕೆಯಾದ ನಂತರ ಮಾತನಾಡಿದ ಜಯವರ್ಧನೆ IMF ಮತ್ತು ಜಾಗತಿಕ ಬ್ಯಾಂಕಿನಿಂದ ಸಾಲ ಪಡೆಯುವ ಕ್ರಮವನ್ನು ಮುಂದುವರಿಸುವುದಾಗಿ ಹೇಳಿದರು.

ಚುನಾವಣೆಯಾದೊಡನೆ ತನ್ನ ಪಕ್ಷದ 143 ಪಾರ್ಲಿಮೆಂಟ್ ಸದಸ್ಯರಿಂದ ರಾಜೀನಾಮೆ ತೆಗೆದುಕೊಂಡ ಜಯವರ್ಧನೆ ಪಾರ್ಲಿಮೆಂಟ್‌ನ ಕಾಲಾವಧಿಯನ್ನು ವಿಸ್ತರಿಸುವ ಉದ್ದೇಶದಿಂದ ಜನಮತ ಪಡೆಯುವ ನಾಟಕವಾಡಿ ಡಿಸೆಂಬರ್ ತಿಂಗಳಿನಲ್ಲಿ ಚುನಾವಣೆ ನಡೆಸಲಾಯಿತು. 5ರಲ್ಲಿ 4 ರಷ್ಟು ಬಹುಮತವನ್ನು ಹೊಂದಿರುವ ಜಯವರ್ಧನೆ ಪಕ್ಷವು 1989ರ ವರೆಗೆ ಕೆಲಸ ನಿರ್ವಹಿಸುವಂತಾಯಿತು. 8 ಪಕ್ಷಗಳ ವಿರೋಧಿ ರಂಗವು ಚುನಾವಣೆ ತೀರಾ ಮೋಸದ್ದಾಗಿತ್ತು ಎಂದು ಅಪಾದಿಸಿದೆ. ಪಾರ್ಲಿಮೆಂಟ್‌ನ ಅವಧಿಯನ್ನು ವಿಸ್ತರಿಸಲು ನಡೆಸಲಾದ ಜನಮತದಲ್ಲಿ 8.1 ಮಿಲಿಯ ಮತದಾತರಲ್ಲಿ ಕೇವಲ ಶೇ. 38 ಜನರು ಮಾತ್ರ ಭಾಗವಹಿಸಿದ್ದು — ಈ ಚುನಾವಣೆಯು ಪಾರ್ಲಿಮೆಂಟ್‌ನ ಅವಧಿಯನ್ನು ವಿಸ್ತರಿಸಲು ಒಪ್ಪಿಗೆ ನೀಡಿತು ಎನ್ನುವುದು ಸರಿಯಲ್ಲವೆಂದು ರಂಗ ಹೇಳಿದೆ. ತನ್ನ ನೀತಿಗಳಿಗೆ ತೀವ್ರ ವಿರೋಧ ಬೆಳೆಯುತ್ತಿರುವುದನ್ನು ಅರಿತಿರುವ ಜಯವರ್ಧನೆ ಪಾರ್ಲಿಮೆಂಟ್‌ನಲ್ಲಿ 28 ಸೀಟುಗಳನ್ನು ಹೆಚ್ಚಿಸಿ ಅದಕ್ಕೆ ಮಿನಿ ಚುನಾವಣೆ ನಡೆಸಲಾಗುವುದೆಂದು ಹೇಳಿರುವುದಾಗಿ ವರದಿಗಳು ಪ್ರಕಟವಾಗಿದ್ದು ವಿರೋಧ ಪಕ್ಷಗಳು ಇದನ್ನು ವಿರೋಧಿಸಿ— ಎಲ್ಲಾ ಸ್ಥಾನಗಳಿಗೂ ಸಾರ್ವತ್ರಿಕ ಚುನಾವಣೆ ನಡೆಸುವಂತೆ ಒತ್ತಾಯಿಸುತ್ತಿವೆ.

ಆರ್ಥಿಕ ಗುಲಾಮಗಿರಿ

ಮಿನಿ ಚುನಾವಣೆಯಂಥ ಸಣ್ಣ ವಿಚಾರಗಳೂ ಕೂಡ ವಿದೇಶಿ ಗುತ್ತೇದಾರರ ಒಪ್ಪಿಗೆ ಪಡೆಯುವಂತ ಸ್ಥಿತಿ ಶ್ರೀಲಂಕದಲ್ಲಿ ಇಂದು ನೆಲಸಿದೆ. ಚುನಾವಣೆಯಾದೊಡನೆ ವಾಷಿಂಗ್‌ಟನ್‌ಗೆ ಭೇಟಿ ನೀಡಿದ ಜಯವರ್ಧನೆಯ ಹಣಕಾಸು ಮಂತ್ರಿಗೆ ಅಂತರಾಷ್ಟ್ರೀಯ ಹಣಕಾಸು ನಿಧಿಯ ವಲಯವು ಶ್ರೀಲಂಕದ ಹಣದ ಮೌಲ್ಯವನ್ನು ಶೇಕಡ 20 ರಷ್ಟು ಕಡಿತ ಮಾಡಲು ತಿಳಿಸಿತು. ಈ ಮಟ್ಟದವರೆಗೆ ವಿದೇಶಿ ಏಕಸಾಮ್ಯ ಶಕ್ತಿಗಳು ಶ್ರೀಲಂಕದ ಆರ್ಥಿಕತೆಯ ಮೇಲೆ ಪ್ರಭಾವ ಬೀರುತ್ತಿವೆ.

ಈ ಎಲ್ಲವುಗಳ ಹಿನ್ನೆಲೆಯಲ್ಲಿ ಜಯವರ್ಧನೆ ಹೆಚ್ಚೆಚ್ಚು ಸರ್ವಾಧಿಕಾರಿಯಾಗಿ ಬೆಳೆಯುತ್ತಿರುವುದು ಕಂಡು ಬರುತ್ತಿದೆ.

—ಕುವತಾರ್ ಕುಂದಾಪುರ

(ಪಿ. ಡಿ. ಕೃಪೆ)

ಪುತ್ತೂರು ತಾಲ್ಲೂಕಿನಲ್ಲಿ ಯಶಸ್ವೀ ಕಾಲ್ನಡೆ ಜಾತಾ

ಹಳ್ಳಿಯ ಬಡಜನರನ್ನು ಸಂಪರ್ಕಿಸಿ ಅವರೊಂದಿಗೆ ಬೆರೆತು ರೈತ ಸಂಘಟನೆಗೆ ಚೈತನ್ಯ ನೀಡಿ ಅದನ್ನು ಬಲಪಡಿಸುವುದಕ್ಕಾಗಿ ಹಾಕಿಕೊಂಡಿರುವ ಹಳ್ಳಿಗಳಿಗೆ ಕಾಲ್ನಡೆ ಜಾಥಾ ಹೋಗುವ ಕಾರ್ಯಕ್ರಮವು ದ. ಕ. ಜಿಲ್ಲೆಯ ಪುತ್ತೂರು ತಾಲ್ಲೂಕಿನಲ್ಲಿ ಯಶಸ್ವಿಯಾಗಿ ಮುಕ್ತಾಯವಾಯಿತು. ತಾ. 28-3-1983ರಂದು ಬೆಳಿಗ್ಗೆ ಪ್ರಾರಂಭವಾಗಿ ತಾ. 4-4-1983 ರಂದು ಮುಕ್ತಾಯವಾದ ಪುತ್ತೂರು ತಾಲ್ಲೂಕಿನೊಳಗಿನ ಜಾಥಾವು ಬಿಳಿನೆಲೆ, ಐತ್ತೂರು, ನೆಕ್ಕಿಲಾಡಿ, ಬಂಟ್ರ, ನೂಜಿಬಾಳ್ತಿಲ, ರೆಂಜಿಲಾಡಿ, ಇಜಿಲಂಪಾಡಿ, ಬಲ್ಯ, ಕುಟ್ರುಪಾಡಿ, ಕಡಬ, ಬಜತ್ತೂರು, ಗೋಳಿತೊಟ್ಟು, ಕೊಣಾಲು, ನೆಲ್ಯಾಡಿ, ಚಿಕ್ಕಮುಡ್ನೂರು, ಪಾಣಾಜೆ, ನಿಡುವಳ್ಳಿ, ಬಡಗನ್ನೂರು, ಕೊಳ್ತಿಗೆ ಮತ್ತು ಆರ್ಯಾಪು ಗ್ರಾಮಗಳಿಗೆ ಭೇಟಿ ಕೊಟ್ಟಿತು. ಎಂಟು ದಿನಗಳ ಜಾಥಾ ಕಾರ್ಯಕ್ರಮದಲ್ಲಿ ಇಪ್ಪತ್ತು ಗ್ರಾಮಗಳ ನೂರಾರು ಬಡಜನರ ಮನೆಗಳಿಗೆ ಭೇಟಿ ಕೊಡಲಾಯಿತು. ಅಲ್ಲಲ್ಲಿ ಸಣ್ಣಮಟ್ಟದ ಸಭೆಯನ್ನು ನಡೆಸಿದುದಲ್ಲದೆ ಬಿಳಿನೆಲೆ, ಪಂರ್ದಳ, ಪಾಣಾಜೆ, ನಿಡುವಳ್ಳಿ ಮತ್ತು ಕೊಳ್ತಿಗೆ ಗ್ರಾಮಂದ ಪೆರ್ಲಂಪಾಡಿಯಲ್ಲಿ ಬಹಿರಂಗ ಸಭೆಗಳನ್ನು ನಡೆಸಲಾಯಿತು. ಜಾಥಾದೊಂದಿಗೆ ಸಾಹಿತ್ಯ ಮಾರಾಟ ಮತ್ತು ಐಕ್ಯರಂಗಕ್ಕೆ ಚಂದಾದಾರರನ್ನು ಸೇರಿಸುವ ಕೆಲಸವು ನಡೆಯಿತು.

ಕಾ। ಎಂ. ಕೆ. ಭಟ್‌ರವರ ನೇತೃತ್ವದಲ್ಲಿ ನಡೆದ ಜಾಥಾದುದ್ದಕ್ಕೂ ಪುತ್ತೂರು ತಾಲ್ಲೂಕು ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾ। ವಿಲ್‌ಫ್ರೆಡ್ ಡಿ'ಸೋಜ ಅವರೂ ಕಾ। ಸುಂದರ ಅವರೂ ಭಾಗವಹಿಸಿದ್ದರು. ಜಾಥಾದುದ್ದಕ್ಕೂ ಏಳೆಂಟು ಜನಗಳಿದ್ದ ತಂಡದಲ್ಲಿ ಕಾ। ಬಿ. ರಾಮಕೃಷ್ಣ, ತಾಲ್ಲೂಕು ರೈತ ಸಂಘದ ಅಧ್ಯಕ್ಷ ಕಾ। ಕಂಬನ್, ರೈತ ಕಾರ್ಮಿಕರ ಮುಂದಾಳುಗಳು ಮತ್ತು ಕಾರ್ಯಕರ್ತರುಗಳಾದ ಕಾ। ಶಿವಪ್ಪಗೌಡ, ಕಾ। ಕುಕ್ಕಪ್ಪಗೌಡ, ಕಾ। ಟಿ. ಸಿ. ಮಾರ್ಕೋಸ್, ಕಾ। ಎ. ಸಿ. ಫ್ರೆಡಿಯನ್, ಕಾ। ಬಾಬುಗೌಡ, ಕಾ। ಜೋಮ, ಕಾ। ಚನಿಯಪ್ಪನಾಯರ್, ಕಾ। ಚನಿಯಪ್ಪಗೌಡ, ಕಾ। ಮೆಗೇಶರಿ ಜೋಮ, ಕಾ। ಲಕ್ಷ್ಮಣಗೌಡ ಮತ್ತು ಹಲವು ಕಾರ್ಯಕರ್ತರು ಅಲ್ಲಲ್ಲಿ ಸೇರಿಕೊಂಡು ಭಾಗವಹಿಸಿದ್ದರು. ಸುಳ್ಯ ತಾಲ್ಲೂಕು ರೈತ ಸಂಘದ ಉಪಾಧ್ಯಕ್ಷ ಕಾ। ಮುತ್ತಡ್ಕ ರಾಮಯ್ಯಗೌಡರೂ ಕೆಲವುದಿನ ಜಾಥಾದಲ್ಲಿ ಭಾಗವಹಿಸಿದ್ದರು. ಬೇಸಿಗೆಯ ನಡುಬಿಸಿಲಿನಲ್ಲಿ ಧೂಳು ತುಂಬಿದ ಹಳ್ಳಿಯ ರಸ್ತೆಯಲ್ಲಿ ಕೆಲವೊಮ್ಮೆ ಜಾತಾದಲ್ಲಿದ್ದ ಕೆಲವರಿಗೆ ಕಷ್ಟವೆನಿಸಿದರೂ ಹಳ್ಳಿಯ ಬಡಜನತೆಯು ಎದುರಿಸುತ್ತಿರುವ ದುಸ್ಥಿತಿಯನ್ನು ನೋಡುವಾಗ ಇದು ಲೆಕ್ಕಕ್ಕಿಲ್ಲವೆನಿಸಿತು.

ಸರ್ಕಾರಿ ಭೂಮಿಯಲ್ಲಿ ಕುಳಿತು ವರ್ಷಗಳು ಸಂದರೂ ಭೂಮಿ ಕಾಯಂ ಆಗದೆ ಬವಣೆಪಡುತ್ತಿರುವ ಸಹಸ್ರಾರು ಬಡಜನ, ಸಾಲಿಗೆಗೊಳಗಾಗಿ ದಿವಾಳಿಯಾಗುತ್ತಿರುವ ಸಣ್ಣ ರೈತರು, ಊಹಿಸುವುದೂ ಅಸಾಧ್ಯವಾದಷ್ಟು ಕಡಿಮೆ ಸಂಬಳಕ್ಕೆ ದುಡಿಯುವ ಅಸಂಖ್ಯಾತ ಕೃಷಿ ಕಾರ್ಮಿಕರು, ತೀರಾ ಹಿಂದುಳಿದಿರುವ ಕುಡಿಯಲು ನೀರಿಗೆ ಗತಿಯಿಲ್ಲದಿರುವ ಹಲವಾರು ಪ್ರದೇಶಗಳು—ಇವೆಲ್ಲಾ ಹಳ್ಳಿಯಲ್ಲಿರುವ ವೈರುಧ್ಯಗಳನ್ನೂ, ಜನತೆಯು ಎದುರಿಸುತ್ತಿರುವ ತುರ್ತು ಸಮಸ್ಯೆಗಳನ್ನೂ ವರ್ಗ ಸಮಾಜದ ಕ್ರೂರತೆಯನ್ನೂ, ಸರ್ಕಾರದ ಯೋಜನೆಗಳ ವೈಫಲ್ಯತೆಯನ್ನೂ ಎತ್ತಿ ತೋರಿಸುತ್ತಿದ್ದವು. ರಾಜ್ಯದಲ್ಲಿ ಬದಲಾಗಿರುವ ರಾಜಕೀಯ ಪರಿಸ್ಥಿತಿಯನ್ನು, ಕರ್ನಾಟಕ ಪ್ರಾಂತ ರೈತ ಸಂಘದ ಧ್ಯೇಯೋದ್ದೇಶ ಹಾಗೂ ನಿರ್ಣಯಗಳನ್ನು ಜನತೆಗೆ ತಿಳಿಸುವುದಕ್ಕೂ ಜಾತಾ ಸಹಕಾರಿಯಾಯಿತು. ಹಳ್ಳಿಯ ಬಡಜನರು ಎದುರಿಸುತ್ತಿರುವ ಮುಖ್ಯ ಸಮಸ್ಯೆಗಳನ್ನೂ, ಅವರ ತಿಳುವಳಿಕೆಯ ಮಟ್ಟವನ್ನೂ ಹಾಗೂ ಹೋರಾಟ ಮಾಡುವುದರ ಬಗೆಗಿರುವ ಮನೋಭಾವವನ್ನೂ ಗುರುತಿಸಿಕೊಳ್ಳಲು ಸಹಾಯವಾಗಿದ್ದು, ಮುಂದೆ ಹೋರಾಟಗಳನ್ನು ನಡೆಸಲು ಜಾತಾವು ತುಂಬಾ ಸಹಾಯ ಮಾಡಿದೆ. ತಾಲ್ಲೂಕಿನೊಳಗೆ ಜಾತಾದ ಕೊನೆಯ ದಿನವಾದ ಏಪ್ರಿಲ್ 4 ರಂದು ಸೇರಿದ್ದ ರೈತದ ಸಂಘದ ತಾಲ್ಲೂಕು ಸಮಿತಿಯ ವಿಸ್ತೃತ ಸಭೆಯಲ್ಲಿ ಜಾತಾದ ಬಗ್ಗೆ ವಿಮರ್ಶೆ ನಡೆಯಿತು. ಈ ಪ್ರದೇಶದ ಹಳ್ಳಿಯ ಬಡಜನತೆ ಎದುರಿಸುತ್ತಿರುವ ಮುಖ್ಯ ಸಮಸ್ಯೆಗಳ ಬಗ್ಗೆ ಪರಿಹಾರಕ್ಕಾಗಿ ಶೀಘ್ರವೇ ಸಂಘಟಿತ ಹೋರಾಟವನ್ನು ನಡೆಸಬೇಕೆಂಬ ಅಭಿಪ್ರಾಯವನ್ನು ಮಾಡಲಾಯಿತು.

ಕಂಪೂಚಿಯಾದಲ್ಲಿ ಅಣೆಕಟ್ಟೆಗೆ ಕಾರ್ಲ್‌ಮಾರ್ಕ್ಸ್‌ರ ಹೆಸರು

ಕಂಪೂಚಿಯಾದ ರಾಜಧಾನಿ ನಾಂಪೆನ್ಹ್ ನಲ್ಲಿರುವ ಸಿಸೋವಾಟ್ ಎಂಬ ಅತಿಸುಂದರ ಅಣೆಕಟ್ಟೆಯೊಂದಕ್ಕೆ ಕಾರ್ಲ್‌ಮಾರ್ಕ್ಸ್‌ರ ಹೆಸರನ್ನು ಇಡಲಾಗಿದೆ. ಏಪ್ರಿಲ್ ಆರರಂದು ನಡೆದ ಈ ಸಮಾರಂಭದಲ್ಲಿ ಕಂಪೂಚಿಯಾ ಪೀಪಲ್ಸ್ ರೆವಲ್ಯೂಷನರಿ ಪಾರ್ಟಿಯ ನಗರ ಸಮಿತಿಯ ಕಾರ್ಯದರ್ಶಿ ಸಿಯೋಸಂಡ ಅವರು ಮಾತನಾಡುತ್ತಾ ವೈಜ್ಞಾನಿಕ ಸಮತಾವಾದದ ಪಿತಾಮಹ ಕಾರ್ಲ್‌ಮಾರ್ಕ್ಸ್‌ನ ಮಹಾನ್ ಸಾಧನೆಗಳನ್ನೂ, ಸಿದ್ಧಾಂತವನ್ನು ಕಂಪೂಚಿಯಾದ ಜನತೆ ಅತ್ಯಂತ ಆದರದಿಂದ ಗೌರವಿಸುತ್ತದೆ ಎಂಬುದನ್ನೂ ಅದೇ ರೀತಿಯಲ್ಲಿ ಸಮಾಜವಾದವನ್ನು ನಿರ್ಮಿಸುವ ಒಂದು ಹೊಸ ಹಾದಿಯಲ್ಲಿ ಕಂಪೂಚಿಯಾ ಸಾಗತೊಡಗಿದೆ ಎಂಬುದನ್ನು ಇದು ಸ್ಪಷ್ಟಪಡಿಸುತ್ತದೆಂದು ಹೇಳಿದರು. ನಾಂಪೆನ್ಹ್‌ನ ಇತರ ಪ್ರದೇಶಗಳಿಗೂ, ರಸ್ತೆಗಳಿಗೂ, ಕಾರ್ಲ್‌ಮಾರ್ಕ್ಸ್, ಲೆನಿನ್, ಜಾರ್ಜ್ ಡಿಮಿಟ್ರೋವ್, ಹೋಚಿಮಿನ್ಹ್ ಮತ್ತಿತರ ವಿಶ್ವ ವಿಖ್ಯಾತ ಕ್ರಾಂತಿ ನಾಯಕರುಗಳ ಹೆಸರನ್ನಿಡಲಾಗಿದೆ.

1983ರ ಮೇ ದಿನದ ಕರೆ

(ಒಂದನೇ ಪುಟದಿಂದ) ವಿರೋಧಿ ನೀತಿಯ ವಿರುದ್ಧ ಹೆಚ್ಚು ಹೆಚ್ಚು ಐಕ್ಯ ಹೋರಾಟಗಳು ನಡೆಯುತ್ತಿವೆ. ರಾಷ್ಟ್ರೀಯ ಆಂದೋಲನಾ ಸಮಿತಿಯ ನೇತೃತ್ವದಲ್ಲಿ ಜನವರಿ 27ರಂದು ಸಾರ್ವತ್ರಿಕ ಉದ್ಯಮಗಳ ಕಾರ್ಮಿಕರ ದೇಶಾದ್ಯಂತ ಒಂದು ದಿನದ ಮುಷ್ಕರದ ಕರೆ, ಕಲ್ಲಿದ್ದಲು ಗಣಿ 7 ಲಕ್ಷ ಕಾರ್ಮಿಕರ ಮೂರು ದಿನದ ಮುಷ್ಕರ, ಕೇಂದ್ರ ಸರ್ಕಾರ ತುಟ್ಟಿಭತ್ಯದ ವಿಚಾರದಲ್ಲಿ ಕಮಿಟಿಯನ್ನು ರಚಿಸುವಂತೆ ಮಾಡಿದೆ. ಉಕ್ಕು ಕಾರ್ಮಿಕರು ಸಿ. ಐ. ಟಿ. ಯು. ಮುಂದಾಳತ್ವದಲ್ಲಿ ಬಿ. ಪಿ. ಇ. ನಿರ್ದೇಶನ ಮುರಿದಿದ್ದಾರೆ. ಆದ್ದರಿಂದ ಬೆಂಗಳೂರು ಸಾರ್ವತ್ರಿಕ ಉದ್ಯಮಗಳ ಆಡಳಿತ ವರ್ಗ ಸಹಾ ತನ್ನ ಧೋರಣೆಯನ್ನು ಬದಲು ಮಾಡಬೇಕಾಗಿ ಬಂತು.

ಬಂಡವಾಳಶಾಹಿ ಜಗತ್ತಿನ ಸಾರ್ವತ್ರಿಕ ಆರ್ಥಿಕ ಬಿಕ್ಕಟ್ಟು ನಮ್ಮ ದೇಶದ ಆರ್ಥಿಕ ಪರಿಸ್ಥಿತಿಯ ಮೇಲೂ ಕೆಟ್ಟ ಪರಿಣಾಮ ಬೀರಿದೆ, ಮತ್ತಷ್ಟು ಹದಗೆಡಿಸಿದೆ. ಇದರ ಭಾರವನ್ನು ಶ್ರಮಜೀವಿಗಳ ಮೇಲೆ ಹೇರಲಾಗುತ್ತಿದೆ. ಇದನ್ನು ಕಾರ್ಮಿಕ ವರ್ಗ ಇತರ ಜನ ವಿಭಾಗಗಳೊಡನೆ ಸೇರಿಕೊಂಡು ಐಕ್ಯ ಹೋರಾಟದ ಮೂಲಕ ಹಿಮ್ಮೆಟ್ಟಿಸಬೇಕಾಗಿದೆ. ಇದಾಗಬೇಕಾದರೆ ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆ ವೃದ್ಧಿಯಾಗಿ, ಛಿದ್ರಕಾರೀ ಶಕ್ತಿಗಳನ್ನು ಸೋಲಿಸಿ ದೇಶದ ಸಮಗ್ರತೆಯನ್ನು ಕಾಪಾಡಲು ಕಾರ್ಮಿಕ ವರ್ಗ ಶ್ರಮಿಸಬೇಕಾಗಿದೆ.

ಅಮೆರಿಕನ್ ಸಾಮ್ರಾಜ್ಯಶಾಹಿಗಳ ಯುದ್ಧ ಘೋರ ನೀತಿಯನ್ನು ಮಣ್ಣು ಮುಕ್ಕಿಸಲು, ಜಗತ್ತಿನಲ್ಲಿ ಶಾಂತಿ ಕಾಪಾಡಲು ಜನತೆಯ, ರೈತ, ಕಾರ್ಮಿಕ ಪ್ರಜಾಪ್ರಭುತ್ವ ಹಕ್ಕುಗಳನ್ನು ಉಳಿಸಲು, ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಬೆಳೆಸಲು ಐಕ್ಯ ಹೋರಾಟವನ್ನು ಮುನ್ನಡೆಸುತ್ತೇವೆಂಬ ಪ್ರತಿಜ್ಞೆಯನ್ನು ಕರ್ನಾಟಕ ರಾಜ್ಯ ಕಾರ್ಮಿಕ ವರ್ಗ ಮೇ ದಿನದಂದು ಕೈಗೊಳ್ಳಲಿ.

ಕಾರ್ಮಿಕ ಇಲಾಖೆ ಇತ್ತ ಗಮನಿಸುವುದೇ

ರಾಣಿಬೆನ್ನೂರು ತಾಲ್ಲೂಕು ಕರೂರು ಎಂಬಲ್ಲಿ ಸದರ್ನ್ ಅಸ್ಬೆಸ್ಟಸ್ ಸಿಮೆಂಟ್ ಕಂ. ಲಿ. ಎಂಬ ಕಾರ್ಖಾನೆ ಇದ್ದು, ಇಲ್ಲಿ ಸಿಮೆಂಟ್ ತಗಡುಗಳು ತಯಾರಾಗುತ್ತಿವೆ. ಸದರಿ ಕಂಪೆನಿಯಲ್ಲಿ ಕೆಲಸಗಾರರು ಐದು ನಿಮಿಷ ತಡವಾಗಿ ಕೆಲಸಕ್ಕೆ ಬಂದರೆ, ಅಧಿಕಾರಿಗಳಿಗೆ ವಿಧೇಯನಾಗಿ ನಡೆಯದಿದ್ದರೆ ತಕ್ಷಣ ಚಾರ್ಜ್ ಶೀಟ್ ಕೊಟ್ಟು ಅಮಾನತ್ತು ಇಟ್ಟು ವಿಚಾರಣೆ ನಡೆಸುವ ಆಟವಾಡುತ್ತಾರೆ. ಇಂದು ಬಾ, ನಾಳೆ ಬಾ ಎಂದು ವಿಚಾರಣೆ ನಡೆಸದೆ ತಿಂಗಳು ಗಟ್ಟಲೆ ಅಲೆದಾಡಲು ಹಚ್ಚುತ್ತಾರೆ. ಈ ಅವಧಿಗೆ ಸಂಬಳ ಕೊಡುವುದಾಗಲೀ, ಪರಿಹಾರ ಕೊಡುವುದಾಗಲೀ ಸಾಧ್ಯವಿಲ್ಲವೆಂದು ಉಪವಾಸದ ದವಡೆಗೆ ನೂಕಿ, ಅಂಥ ಕೆಲಸಗಾರರ ಸಂಬಂಧಿಕರಲ್ಲಿ ಅಥವಾ ಸ್ನೇಹಿತರಲ್ಲಿ ಭಯಾನಕ ವಾತಾವರಣವನ್ನುಂಟುಮಾಡಿ ತಪ್ಪಾಗಿದೆ ಎಂದು ಬರೆಸಿಕೊಂಡು ಕೆಲಸಕ್ಕೆ ತೆಗೆದುಕೊಳ್ಳುತ್ತಾರೆ. ಈ ಬಗ್ಗೆ ಅನೇಕ ಸಲ ಸಂಬಂಧಪಟ್ಟ ಕಾರ್ಮಿಕ ಅಧಿಕಾರಿಗಳ ಗಮನಕ್ಕೆ ತಂದರೂ ಅವರು ಗಮನಿಸದೇ ಮಾಲೀಕರ ಜೊತೆ ಶಾಮೀಲಾಗಿರುವಂತೆ ವರ್ತಿಸುತ್ತಾರೆ. ಇದರಿಂದ ಆಡಳಿತ ವರ್ಗ ಏನೇ ಮಾಡಿದರೂ ನಡೆಯುತ್ತದೆಂದು ದಬ್ಬಾಳಿಕೆ ಮುಂದುವರಿಸುತ್ತಿದ್ದಾರೆ. ಸಂಬಂಧಪಟ್ಟ ಕಾರ್ಮಿಕ ಇಲಾಖೆಯವರು ಕೂಲಂಕಷವಾಗಿ ವಿಚಾರಣೆ ನಡೆಸಿ, ಇಂಥ ದಬ್ಬಾಳಿಕೆ ತಡೆಗಟ್ಟಲು ಸೂಕ್ತ ಕ್ರಮ ಕೈಗೊಳ್ಳದಿದ್ದಲ್ಲಿ ಕಾರ್ಮಿಕರು ಅಸಿಸ್ಟೆಂಟ್ ಲೇಬರ್ ಕಮೀಷನರ್ ಆಫೀಸ್ ಎದುರು ಪ್ರತಿಭಟಿಸದೆ ಅನ್ಯ ಮಾರ್ಗವಿಲ್ಲವೆಂದು ಆಲೋಚಿಸುತ್ತಿದ್ದು ಕೈ ಮೀರುವ ಮೊದಲೇ ಅಸಿಸ್ಟೆಂಟ್ ಲೇಬರ್ ಕಮಿಷನರ್ ರವರು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಕಾರ್ಮಿಕರ ಒತ್ತಾಯವಾಗಿದೆ.

—ವೈ. ಬಿ. ರೋಖಡೆ

ನೆರೆಹೊರೆ

(2ನೇ ಪುಟದಿಂದ)

ಮಂಡಲದ ಸೆಲೆಕ್ಟ್ ಕಮಿಟಿಯ ಸಮ್ಮುಖವಿರುವ ಮುಷ್ಕರ ನಿಷೇಧ ಮಸೂದೆಯನ್ನು ವಾಪಸು ಪಡೆಯಬೇಕೆಂದು ಒತ್ತಾಯಿಸಿ, ಬೃಹತ್ ಪ್ರದರ್ಶನ ಹಾಗೂ ಸಭೆ ನಡೆಯಿತು. ಆಳುವ ಎ.ಐ.ಎ.ಡಿ.ಎಂ.ಕೆ. ಯ ಕಾರ್ಮಿಕ ಸಂಘಟನೆ ಬಿಟ್ಟು ಉಳಿದೆಲ್ಲಾ ಕಾರ್ಮಿಕ ಸಂಘಗಳ ಜಂಟಿ ಕ್ರಿಯಾ ಸಮಿತಿ ಈ ಪ್ರದರ್ಶನವನ್ನು ಸಂಘಟಿಸಿತ್ತು. ರಾಜ್ಯದ ಬೇರೆಡೆಗಳಿಂದ ಕಾರ್ಮಿಕರು, ನೌಕರರು ಮದರಾಸಿಗೆ ಬರದಂತೆ ನೋಡಿಕೊಳ್ಳುವಂತೆ ಸರಕಾರ ಶತಪ್ರಯತ್ನ ನಡೆಸಿದ್ದರೂ ತಮಿಳುನಾಡಿನ ಕಾರ್ಮಿಕರು ಹಾಗೂ ನೌಕರರು ಸುಡುವ ಬಿಸಿಲನ್ನು ಲೆಕ್ಕಿಸದೆ ಕಾರ್ಮಿಕ ವಿರೋಧೀ ಕ್ರಮಗಳ ಬಗ್ಗೆ ತಮ್ಮ ತೀವ್ರ ಅಸಂತೋಷವನ್ನು ಸ್ಪಷ್ಟವಾಗಿ ಎಂ. ಜಿ. ಆರ್. ಸರಕಾರಕ್ಕೆ ತೋರ್ಪಡಿಸಿದ್ದಾರೆ.

ಮುಂದಿನ ಹೆಜ್ಜೆಯಾಗಿ ಎಂ. ಜಿ. ಆರ್. ಸರಕಾರ ಈ ಪ್ರತಿಭಟನೆಯನ್ನು ಗಮನಕ್ಕೆ ತೆಗೆದುಕೊಳ್ಳದಿದ್ದರೆ, ರಾಜ್ಯಾದಂತ ಒಂದು ದಿನದ ಮುಷ್ಕರದ ಬಗ್ಗೆ ಜಂಟಿ ಕ್ರಿಯಾಸಮಿತಿ ತನ್ನ ಮುಂದಿನ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಿದೆ.

ಕಾ. ಇ. ಎಂ. ಎಸ್. ನೇತೃತ್ವದ ಸಿ.ಪಿ.ಐ.(ಎಂ) ನಿಯೋಗ ಚೀನಾಗೆ

ಚೀನೀ ಕಮ್ಯೂನಿಸ್ಟ್ ಪಕ್ಷದ ಆಹ್ವಾನದ ಮೇರೆಗೆ ಕಾ। ಇ. ಎಂ. ಎಸ್. ನೇತೃತ್ವದ ಉನ್ನತ ನಿಯೋಗವೊಂದು ಏಪ್ರಿಲ್ 22ರಂದು ಚೀನಾಕ್ಕೆ ತೆರಳಿತು.

ನಿಯೋಗವು ಸಿ. ಪಿ. ಐ. (ಎಂ) ಪ್ರಧಾನ ಕಾರ್ಯದರ್ಶಿ ಕಾ। ಇ. ಎಂ. ಎಸ್. ನಂಬೂದಿರಿಪಾಡ್, ಸಿ.ಪಿ.ಐ. (ಎಂ) ಪೊಲಿಟ್ ಬ್ಯೂರೋ ಸದಸ್ಯರಾದ ಕಾ। ಎಂ. ಬಸವಪುನ್ನಯ್ಯ ಹಾಗೂ ಕಾ। ಹರ್‌ಕಿಶನ್ ಸಿಂಗ್ ಸುರ್ಜೀತ್ ಅವರುಗಳನ್ನೊಳಗೊಂಡಿದೆ.

ಸಿ. ಪಿ. ಐ. (ಎಂ) ಮತ್ತು ಚೀನೀ ಕಮ್ಯೂನಿಸ್ಟ್ ಪಕ್ಷಗಳ ನಡುವೆ ಕಳೆದ 16 ವರ್ಷಗಳಿಂದಲೂ ಸರಿಯಾದ ಸಂಬಂಧಗಳು ಇಲ್ಲದೇ ಹೋಗಿದ್ದರೂ ಕೂಡ ಸಿ. ಪಿ. ಐ. (ಎಂ) ನಾಯಕರುಗಳು ಚೀನಾದ ಜನತಾ ಸಂಘಟನೆಗಳ ಆಹ್ವಾನದ ಮೇರೆಗೆ ಚೀನಾಕ್ಕೆ ಹೋಗಿ ಬಂದಿದ್ದಾರೆ.

ಸಿ. ಪಿ. ಐ. (ಎಂ)ನ ಪೊಲಿಟ್ ಬ್ಯೂರೋ ಸದಸ್ಯರಾಗಿದ್ದ ದಿವಂಗತ ಕಾ। ಪ್ರಮೋದ್‌ದಾಸ್ ಗುಪ್ತಾರವರು ಕಳೆದ ವರ್ಷ ಚೀನಾ ಸರ್ಕಾರದ ಆಹ್ವಾನವನ್ನು ಒಪ್ಪಿಕೊಂಡು ಚಿಕಿತ್ಸೆಗಾಗಿ ಚೀನಾಕ್ಕೆ ತೆರಳಿದ್ದರು. ಆ ಸಂದರ್ಭದಲ್ಲಿ ಅವರು ಚೀನೀ ನಾಯಕರೊಂದಿಗೆ ಎರಡು ಸುತ್ತಿನ ಮಾತುಕತೆ ನಡೆಸಿದ್ದರು. ಆದಾಗ್ಯೂ ಕೂಡ ಸಿ. ಪಿ. ಐ. (ಎಂ) ಮತ್ತು ಚೀನೀ ಕಮ್ಯೂನಿಸ್ಟ್ ಪಕ್ಷಗಳ ನಡುವಿನ ಸಂಬಂಧಗಳ ಅಭಿವೃದ್ಧಿಗಾಗಿ ಚೀನೀ ಸರ್ಕಾರ ಅಧಿಕಾರ ಪೂರ್ವಕವಾದ ಆಹ್ವಾನ ಕಳಿಸಿರುವುದು ಇದೇ ಪ್ರಥಮ.

ಇದಕ್ಕೆ ಮೊದಲು ಚೀನಾದ ಹಲವಾರು ಸಂಘಟನೆಗಳ ಆಹ್ವಾನದ ಮೇಲೆ ಸಿ. ಪಿ. ಐ. (ಎಂ)ನ ಪೊಲಿಟ್ ಬ್ಯೂರೋ ಸದಸ್ಯರಾದ ಕಾ। ಬಸವಪುನ್ನಯ್ಯ ಅವರು ಮೂರು ಬಾರಿ ಚೀನಾಕ್ಕೆ ಭೇಟಿ ಕೊಟ್ಟಿದ್ದಾರೆ. ಇದೇ ರೀತಿಯಲ್ಲಿ ಇತರ ಸಿ. ಪಿ. ಐ. (ಎಂ) ನಾಯಕರುಗಳೂ ಕೂಡ ಚೀನಾ ಪ್ರವಾಸ ಮಾಡಿದ್ದಾರೆ.

ಚೀನಾ ಭೇಟಿಯ ಕುರಿತು ಕಾ। ಬಸವ ಪುನ್ನಯ್ಯ ಅವರು ಪತ್ರಿಕಾಗೋಷ್ಠಿಯಲ್ಲಿ ಹೀಗೆ ಹೇಳಿದ್ದಾರೆ:

'ಸಿ. ಪಿ. ಐ. (ಎಂ)ನ ಪ್ರತಿನಿಧಿಗಳು ಮೊದಲ ನಾಲ್ಕು ಅಥವ ಐದು ದಿನಗಳ ಕಾಲ ಚೀನೀ ನಾಯಕರೊಡನೆ ಮಾತುಕತೆ ನಡೆಸಲಿದೆ. ಮಾತುಕತೆಯ ಸಮಯದಲ್ಲಿ ಎರಡೂ ಪಕ್ಷಗಳ ನಡುವೆ ಇದ್ದ ಸಂಬಂಧಗಳು ಕೆಲವು ವರ್ಷಗಳ ಹಿಂದೆ ಮುರಿದು ಬಿದ್ದದ್ದನ್ನು ಮತ್ತೆ ಸರಿಪಡಿಸುವ ಕುರಿತಾಗಿ ಚರ್ಚೆ ನಡೆಸಲಾಗುತ್ತದೆ. ನಂತರ ನಿಯೋಗವು ಚೀನಾದಲ್ಲಿ ಪ್ರವಾಸ ಕೈಗೊಳ್ಳಲಿದೆ' ಎಂಬುದಾಗಿ ತಿಳಿಸಿದ್ದಾರೆ.

ಪರಿಸರ

- ರಾಜಸ್ಥಾನದ ಜಯಸಲ್ಮೇರ ಜಿಲ್ಲೆಯಲ್ಲಿ ಬರದ ಪರಿಣಾಮವಾಗಿ ಸುಮಾರು ನೂರು ಜನ ಹಸಿವು, ಪೌಷ್ಟಿಕಾಂಶಗಳ ಕೊರತೆಗಳಿಂದ ಸತ್ತಿದ್ದಾರೆ ಎಂದು ತಿಳಿದು ಬಂದಿದೆ. ಬರದ ಪರಿಣಾಮವಾಗಿ ಜನ ಸಜ್ಜೆ, ಕರಬೂಜ ಬೀಜ, ತೊಗಟೆ ಇವುಗಳನ್ನು ತಿನ್ನುತ್ತಿದ್ದಾರೆ. 9 ಆರೋಗ್ಯ ಕೇಂದ್ರಗಳಲ್ಲಿ ಕೇವಲ 2 ಮಾತ್ರ ಕೆಲಸ ಮಾಡುತ್ತಿರುವುದರಿಂದ ಸ್ಥಿತಿ ಇನ್ನೂ ಶೋಚನೀಯವಾಗಿದೆ ಎಂದು ವರದಿಯಾಗಿದೆ.

  —ಪಿ. ಟಿ. ಐ. ಏ. 13

- ದೇಶದ ಜನಸಂಖ್ಯೆಯಲ್ಲಿ ಶೇಕಡಾ 48.13ರಷ್ಟು ದಾರಿದ್ರ್ಯ ರೇಖೆಯ ಕೆಳಗಿದ್ದಾರೆ ಎಂದು ಪ್ರಶ್ನೆಯೊಂದಕ್ಕೆ ಉತ್ತರವಾಗಿ ಲೋಕಸಭೆಯಲ್ಲಿ ಹೇಳಲಾಯಿತು.

  —ಯು. ಎನ್. ಐ. ಏ. 18

- ವಿದೇಶಗಳಲ್ಲಿರುವ ಭಾರತೀಯರಿಂದ ದೇಶಕ್ಕೆ ಹಣವನ್ನು ಆಕರ್ಷಿಸಲು ಬಜೆಟ್‌ನಲ್ಲಿ ಸೂಚಿಸಲಾದ ಕ್ರಮಗಳು, ದೊಡ್ಡ ಪ್ರಮಾಣದ ತೆರಿಗೆಗಳ್ಳತನ, ಕಪ್ಪು ಹಣವನ್ನು ಬಿಳಿಯಾಗಿಸಿ ತೆರಿಗೆರಿಯಾಯಿತಿ ಅನುಭವಿಸುವಂತಹ ಸಂದರ್ಭಗಳಿಗೆ ಎಡೆ ಮಾಡಿಕೊಡುವ ಹಾಗೆ ಕಾಣುತ್ತದೆ.

  —ಇಂಡಿಯನ್ ಎಕ್ಸ್‌ಪ್ರೆಸ್ ಏ. 16

- ಕಳೆದ ವರ್ಷ (1982) ವಿದೇಶಿ ಕಂಪನಿಗಳೊಡನೆ ಸಹಕಾರ ಒಪ್ಪಂದಗಳ ಸಂಖ್ಯೆ ಶೇಕಡಾ 50ರಷ್ಟು ಏರಿತು (1981ರಿಂದ) ಹಾಗೂ ಇದರಿಂದ ಭಾರತದೊಳಗೆ ಬಂದ ವಿದೇಶಿ ಬಂಡವಾಳ 62.8 ಕೋಟಿ ರೂ. ಇದು ಕಳೆದ 9 ವರ್ಷಗಳಲ್ಲಿ ದೇಶದೊಳಗೆ ಬಂದ ಒಟ್ಟು ವಿದೇಶಿ ಬಂಡವಾಳಕ್ಕಿಂತಲೂ ಹೆಚ್ಚು. 1980 ರಿಂದೀಚೆಗೆ ಇಂತಹ ಒಪ್ಪಂದಗಳ ಸಂಖ್ಯೆ ಅದರ ಮೊದಲಿನ ಸರಾಸರಿಗಿಂತ ಇಮ್ಮಡಿಯಾಗಿದೆ.

  —ಇಂಡಿಯಾ ಟುಡೇ ಏ. 15

Printed & Published by P. Ramachandra Rao by him on behalf of the Communist Party of India (Marxist) Karnataka State Committee L-56 K. V. Temple Street Sultanpet, Bangalore 560053. Editorial and managerial office : L-56, K. V. Temple Street, Sultanpet, B-53. Phone : 2415
Printed at Karnataka Pressmen Associates (P) Limited, 54/1, K. R. Road, Bangalore-4 Editor : P. RAMACHANDRARAO